# ಜ್ಞಾನಶಕ್ತಿ
ಮಾಸ ಪತ್ರಿಕೆ

JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೨ | ನೋಂದಣಿ ಸಂಖ್ಯೆ : KARBIL / 2005 / 16123 | ಸೆಪ್ಟಂಬರ್ - 2013 | ಸಂಚಿಕೆ ೯


**ಶ್ರೀ ಸುಬ್ರಹ್ಮಣ್ಯ ಸಭಾದ ಮುಂದಿನ ಕಾರ್ಯಕ್ರಮ : ತಾ. 20–10–2013 ಆದಿತ್ಯವಾರ ನಾಡ ಹಬ್ಬ ಆಚರಣೆ**

# ಅಲಾರೇ ಅಲಾರೇ... ಮುಕುಂದ ಮುರಾರೇ...

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾರೀಕು 1-9-2013ರಂದು ಬೆಳಗ್ಗೆ ಶ್ರೀ ಕೃಷ್ಣ ಜನ್ಮಾಷ್ಟಮಿಯ ಕಾರ್ಯಕ್ರಮವನ್ನು ದೀಪ ಬೆಳಗಿಸಿ, ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣದ ಮೂಲಕ ಚಾಲನೆ ನೀಡಲಾಯಿತು. ಅನಂತರ ವಿವಿಧ ವಿಭಾಗಗಳಲ್ಲಿ ಹಿರಿಯರಿಗೆ ಮತ್ತು ಕಿರಿಯರಿಗೆ ಶ್ರೀ ಭಗವದ್ಗೀತೆಯ ಶ್ಲೋಕ ಪಠಣ ಸ್ಪರ್ಧೆ ಆರಂಭಗೊಂಡಿತು. ಭಕ್ತಿಪೂರ್ವಕವಾಗಿ ಪಠಿಸಿದ ಎಲ್ಲರೂ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಿದರು. ಒಮ್ಮಿಂದೊಮ್ಮೆಗೆ ಸಭೆಯಲ್ಲಿ ಉತ್ಸಾಹದ ಸಂಭ್ರಮದ ವಾತಾವರಣ ಸೃಷ್ಟಿಯಾಯಿತು. ಕಾರಣ ವಿಷ್ಟೇ. ಮುದ್ದು ಕಂದಮ್ಮಗಳ ಕೃಷ್ಣವೇಷ ಸ್ಪರ್ಧೆ ಪ್ರಾರಂಭಗೊಂಡಿತು. ಬಹುಶಃ ದೇಗುಲಕ್ಕೆ ಭೇಟಿ ನೀಡಿದರೆ ಒಂದೇ ರೀತಿಯ ಕೃಷ್ಣನನ್ನು ದರ್ಶನ ಮಾಡಬೇಕಾಗಿತ್ತು. ಆದರಿಲ್ಲಿ ಅಂಬೆಗಾಲಿನ ಕೃಷ್ಣ, ಬೆಣ್ಣೆಕೃಷ್ಣ, ರಾಧಾಕೃಷ್ಣ, ಕಾಳಿಂಗಮರ್ದನ ಕೃಷ್ಣ ಹೀಗೆ ಹಲವಾರು ಕೃಷ್ಣರು ಸಾಕಾರಗೊಂಡಿದ್ದು ನೋಡುಗರ ಕಣ್ಣುಗಳು ಸೆಳೆಯುತ್ತಿದ್ದುವು. ಭಕ್ತಿಗೀತೆಯ ಸ್ಪರ್ಧೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಸದಸ್ಯರು ಭಾಗವಹಿಸಿದ್ದರು.

ಸಭಾಂಗಣದ ಮೇಲಿನ ಅಂತಸ್ತಿನಲ್ಲಿ ನಡೆದ ಮಡಕೆ ಒಡೆಯುವ ಸ್ಪರ್ಧೆಯಲ್ಲಿ ಯುವಕರು ಅವಿರತ ಪ್ರಯತ್ನ ನಡೆಸಿ ಮೊಸರು ಕುಡಿಕೆ ಉತ್ಸವವನ್ನು ನೆನಪಿಸಿದರು. ಬೆಳಗ್ಗೆಯಿಂದಲೇ ಒಂದು ಚೀಲದಷ್ಟು ಚಕ್ಕುಲಿಯು 'ಊಹನೆ ಸ್ಪರ್ಧೆ'ಗೆ ತಯಾರಾಗಿತ್ತು. ಸುಮಾರು 75ಕ್ಕೂ ಅಧಿಕ ಮಂದಿ ತಮ್ಮ ಜಾಣ್ಮೆಯನ್ನು ಪರೀಕ್ಷಿಸಿದ್ದರು. ಮಧ್ಯಾಹ್ನದ ಭೋಜನದಲ್ಲಿ ಮೂಡೆ, ಮೆಣಸಿನಕಾಯಿ, ರಸಾಯನ, ಪಾಯಸ, ಗೆಣಸಿನ ಪೋಡಿ, ಜಿಲೇಬಿಗಳು ಸಮಾಜ ಬಾಂಧವರ ಉದರ ಸೇರಿ ಆನಂದದ ನಗು ಬೀರಿದರು.

ಮಧ್ಯಾಹ್ನದ ಬಳಿಕ ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆಯನ್ನು ಶ್ರೀ ಸುರೇಶ್ ಕಡಬರವರು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಸಾಂಸ್ಕೃತಿಕ ಕಾರ್ಯಕ್ರಮ ಪ್ರಾರ್ಥನೆಯಿಂದ ಮೊದಲ್ಗೊಂಡು, ಶ್ರೀಗಣೇಶ ನೃತ್ಯರೂಪಕ, ಭರತನಾಟ್ಯ, ಪುಟಾಣಿಗಳ ನೃತ್ಯ ಕಾರ್ಯಕ್ರಮಗಳು ನಡೆದವು. ಶ್ರೀಸಭಾದ ಮಹಿಳೆಯರ ಎರಡು ತಂಡ, ಪುರುಷರ ಒಂದು ತಂಡಗಳು ಶ್ರೀಮತಿ ಅನುರಾಧ ರಾವ್‌ರವರ ಸಂಯೋಜನೆಯ ನೃತ್ಯಗಳನ್ನು ಪ್ರದರ್ಶಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು. ಭಾಗವಹಿಸಿದ ಎಲ್ಲಾ ಮುದ್ದುಕೃಷ್ಣ ಸ್ಪರ್ಧಿಗಳಿಗೆ ಶ್ರೀ ಸದಾಶಿವ ಶಾಸ್ತ್ರಿಯವರು ಪ್ರೋತ್ಸಾಹಧನವನ್ನು ನೀಡಿದರೆ, ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಕೂಡ್ಲು ಶ್ರೀ ವಿಷ್ಣು ಶ್ಯಾನುಭೋಗರು ಬಹುಮಾನ ನೀಡಿದರು. ಕೂಡ್ಲು ಶ್ರೀ ವಿಷ್ಣು ಶ್ಯಾನುಭೋಗರವರು, ತಮ್ಮ ಪುತ್ರ ದಿ. ಕೇಶವ ಶ್ಯಾನುಭೋಗ ಹೆಸರಿನ ವಿದ್ಯಾನಿಧಿಗೆ ಇನ್ನೂ ಹೆಚ್ಚಿನ ರೂಪಾಯಿ 40,000/–ಗಳನ್ನು ನೀಡಿ ಸಿ.ಎ. ಕಲಿಯುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಉದ್ದೇಶದಿಂದ ಸ್ಥಾಪಿತ ನಿಧಿಯನ್ನು ರೂಪಾಯಿ 1,00,000ಕ್ಕೆ ಮೀಸಲಿಟ್ಟಿದ್ದಾರೆ. ಧನ್ಯವಾದ ಮತ್ತು ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ಶ್ರೀ ವಿದ್ಯಾರಣ್ಯ ಕೆ., ಶ್ರೀಮತಿ ಶೈಲಜಾ ಶ್ರೀಕಾಂತ್ ಮತ್ತು ಶ್ರೀಮತಿ ಕುಸುಮಾ ನವೀನ್ ಕಾರ್ಯಕ್ರಮ ಸಂಯೋಜಿಸಿದರೆ ಶ್ರೀ ನಾಗರಾಜ್ ವರ್ಕಾಡಿ ಮತ್ತು ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರ್ವಹಿಸಿದರು.

*ವರದಿ : ಶ್ರೀಮತಿ ಅರುಣಾ ಸೋಮಶೇಖರ್*

*ಚಿತ್ರಗಳು : ರಘುವೀರ ಪೆರ್ಡೂರು*









## ಒಂದು ವಿಜ್ಞಾಪನೆ

'ಜ್ಞಾನಶಕ್ತಿ ಪತ್ರಿಕೆಯನ್ನು ಆರ್ಥಿಕವಾಗಿ ಸುದೃಢಗೊಳಿಸುವ ದೃಷ್ಟಿಯಿಂದ ಸಮಾಜ ಬಾಂಧವರು ಉದಾರ ಧನಸಹಾಯವನ್ನು ಹಾಗೂ ಜಾಹೀರಾತುಗಳನ್ನು ನೀಡಿ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

**ಜಾಹೀರಾತು ದರ**

1. 6 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) - ರೂ. 600/-
2. 12 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) - ರೂ. 1000/-
3. ಶುಭಾಶಯಗಳು - ರೂ. 100/-

**Please : log on to www.subramanyasabha.com for Jnanashakthi Monthly, Event Photos, Address of Sthanikas and latest Informations.**

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್ ಪುತ್ತೂರು**

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಕೃಷ್ಣ ಭಟ್**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**


## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...

ಪುತ್ತೂರಿನ ಕೊಂಬೆಟ್ಟಿನಲ್ಲಿರುವ **ಡಾ. ಭಾಸ್ಕರ ಧಾರೇಶ್ವರ**ರವರು ದಿನಾಂಕ 25-07-2013ರಂದು ನಿಧನ ಹೊಂದಿದರು. ಅವರು ಇಬ್ಬರು ಹೆಣ್ಣು ಮಕ್ಕಳು, ಪತ್ನಿ ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ. ಇವರು ಮಹಾರಾಷ್ಟ್ರ ಸರಕಾರದ ಜೊಯುಲಜಿ ವಿಭಾಗದಲ್ಲಿ ಪ್ರಮುಖ ವಿಜ್ಞಾನಿಯಾಗಿ ನಾಗಪುರದಲ್ಲಿ ಸೇವೆ ಸಲ್ಲಿಸಿದ್ದರು.

## ನಮ್ಮ ಪತ್ರಿಕೆಯ 'ಆಜೀವ ಬೆಂಬಲಿಗರು'

**ಶ್ರೀ ಸುಬ್ರಹ್ಮಣ್ಯ ಕೆ. ರಾವ್**, ಹಳೆಯಂಗಡಿ
**ಶ್ರೀ ರಘುರಾಮ್ ರಾವ್**, ಕೇದಗೆ
**ಡಾ. ವೈ. ಸುದರ್ಶನ್ ರಾವ್**, ಉಡುಪಿ
**ಶ್ರಿ ಎಂ. ಕೆ. ಮೋಹನ ರಾವ್**, ಪಡುಬಿದ್ರಿ
**ಶ್ರೀ ಶ್ರೀಪತಿ ರಾವ್**, ಬೆಳುವಾಯಿ
**ಶ್ರೀ ಎಂ. ಕೃಷ್ಣರಾಜ್ ರಾವ್**, ಸಿಲ್‌ವಸ್ಸ್
**ಶ್ರೀ ಕೃಷ್ಣ ವಿ.**, ಬೆಂಗಳೂರು
**ಶ್ರೀ ಎನ್. ಎಸ್. ರಾಮಸ್ವಾಮಿ**, ಮಣ್ಣಗುಡ್ಡ
**ಶ್ರೀ ಡಿ. ಪದ್ಮನಾಭ ರಾವ್**, ವಿಟ್ಲ
**ಶ್ರೀ ದೀಪಕ ಕೆ. ಶ್ಯಾನುಭೋಗ್**, ಎಕ್ಕೂರು
**ಶ್ರೀ ಕೆ. ಎಚ್. ರವಿಕುಮಾರ್**, ಬಿಜೈ, ನ್ಯೂರೋಡ್
**ಶ್ರೀ ಕೆ. ವಿ. ದಿವಾಕರ್ ರಾವ್**, ತೋಕೂರು
**ಶ್ರೀ ಐ. ಪಿ. ನಾಗರಾಜ್ ರಾವ್**, ಬೆಂಗಳೂರು
**ಶ್ರೀ ಯು. ಪ್ರಭಾಕರ್ ರಾವ್**, ಉಜ್ಜೋಡಿ
**ಶ್ರೀ ಎಸ್. ಪದ್ಮನಾಭ ಹೆಬ್ಬಾರ್**, ಚಿಟ್ಪಾಡಿ
**ಶ್ರೀ ಯು. ಎಸ್. ಸದಾಶಿವ ರಾವ್**, ಮಂಗಳೂರು
**ಶ್ರೀ ಉದಯ ಕುಮಾರ್ ಪಿ. ರಾವ್**, ಕೊಟ್ಟಾರ
**ಶ್ರೀ ನರೇಂದ್ರ ಎಮ್.**, ಪುತ್ತೂರು
**ಶ್ರೀ ಅರುಣ ಕುಮಾರ್ ಎಂ. ಎಸ್.**, ಉಜಿರೆ
**ಶ್ರೀ ಸುರೇಶ ಕೆ.**, ಮಂಗಳೂರು
**ಶ್ರೀ ಪಿ. ದಯಾನಂದ ರಾವ್**, ಮಂಗಳೂರು
**ಶ್ರೀ ಎ. ಚಿಂತಾಮಣಿ ರಾವ್**, ಬೆಂಗಳೂರು
**ಶ್ರೀ ಸಿ. ರಾಘವೇಂದ್ರ ರಾವ್**, ಚಿತ್ರಾಪುರ
**ಶ್ರೀ ಪಿ. ಮುರಳೀಧರ್ ರಾವ್**, ಮಂಗಳೂರು
**ಡಾ. ಎಸ್. ಹರೀಶ್ ಜೋಷಿ**, ಕಾರ್‌ಸ್ಟ್ರೀಟ್
**ಶ್ರೀ ಕೆ. ಶ್ಯಾಮ್‌ಪ್ರಸಾದ್ ಶ್ಯಾನುಭೋಗ್**, ಉರ್ವ
**ಡಾ. ಐ. ಪ್ರಭಾಕರ್ ರಾವ್**, ಮಂಗಳೂರು
**ಶ್ರೀ ಶ್ರೀನಿವಾಸ್ ರಾವ್**, ಕೂಳೂರು

## ಮನೆಯೇ ಮಂತ್ರಾಲಯ...



ಶ್ರೀಮತಿ ಜ್ಞಾನೇಶ್ವರಿ ರಾವ್‌ರವರು ಉಡುಪಿಯ ಕುಕ್ಕಿಕಟ್ಟೆ ಅನಂತ ಕೃಷ್ಣ ನಗರದಲ್ಲಿ ನಿರ್ಮಿಸಿದ ನೂತನ ಗೃಹ **'ಜ್ಞಾನ-ಸುಧಾ'**ದ ಗೃಹಪ್ರವೇಶ ಕಾರ್ಯಕ್ರಮವು ತಾ. 30-8-2013ರಂದು ನೆರವೇರಿತು.

ಶ್ರೀಮತಿ ಯಮುನ ಕೆ. ಮತ್ತು ಶ್ರೀ ನಾಗಪ್ಪಯ್ಯ ಮೇರ್ಟ್‌ರವರು ದೊಡ್ಡಬಿಡಾರಕಲ್ಲು ಬೆಂಗಳೂರಿನಲ್ಲಿ ನಿರ್ಮಿಸಿದ ನೂತನ ಗೃಹ **'ಶ್ರೀಷಾ'**ದ ಗೃಹಪ್ರವೇಶ ಕಾರ್ಯಕ್ರಮವು ತಾ. 22-8-2013ರಂದು ನೆರವೇರಿತು.

## ಹೊಸಬಾಳಿನ... ಹೊಸಿಲಲಿ ನಿಂತಿರುವ

ಶ್ರೀ ವಿಜಯಕುಮಾರ್ ತಾಳೆಪ್ಪಾಡಿ ಮತ್ತು ಶ್ರೀಮತಿ ಜಯಂತಿಯವರ ಪುತ್ರಿ **ಅಭಿನೇತ್ರಿ**ಯವರ ವಿವಾಹ ಶ್ರೀ ಜಯರಾಂ ಭಟ್ ಮತ್ತು ಶ್ರೀಮತಿ ವಿಜಯರವರ ಪುತ್ರ **ವಿವೇಕ್**ನೊಂದಿಗೆ ಮಂಗಳೂರಿನ 'ಸಂಘನಿಕೇತನ'ದಲ್ಲಿ ತಾ. 25-8-2013ರಂದು ನೆರವೇರಿತು.

❊ ❊ ❊

ಶ್ರೀ ಪಲಿಮಾರ್ ನಟರಾಜ್ ಮತ್ತು ಶ್ರೀಮತಿ ಉಷಾರವರ ಪುತ್ರ **ಅಭಿಷೇಕ**ನ ವಿವಾಹವು ಶ್ರೀಮತಿ ಸುರೇಖ ಮತ್ತು ಶ್ರೀ ಆದ್ಯಪ್ಪಾಡಿ ಶ್ರೀ ಕೃಷ್ಣಸ್ವಾಮಿ ಬೆಂಗಳೂರು ಇವರ ಪುತ್ರಿ **ಕಾವ್ಯ**ಳೊಂದಿಗೆ ತಾರೀಕು 25-8-2013ರಂದು ಬೆಂಗಳೂರಿನ 'ಶ್ರೀಕೃಷ್ಣ ಧಾರ್ಮಿಕ ಸಭಾಂಗಣ'ದಲ್ಲಿ ನಡೆದು ವಧೂಗೃಹಪ್ರವೇಶ ಕಾರ್ಯಕ್ರಮವು ತಾ. 29-08-2013ರಂದು ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ನೆರವೇರಿತು.

❊ ❊ ❊

ಶ್ರೀ ಡಿ. ನಾರಾಯಣ ರಾವ್ ಮತ್ತು ಶ್ರೀಮತಿ ಉಷಾರವರ ಪುತ್ರ **ಶರತ್ ಕುಮಾರ್** ಮತ್ತು ಮರೋಳಿ ಶ್ರೀ ಮೋಹನ್ ರಾವ್ ಮತ್ತು ಶ್ರೀಮತಿ ಹೇಮರವರ ಪುತ್ರಿ **ಅನುಷಾ**ಳ ವಿವಾಹವು ತಾರೀಕು 18-8-2013ರಂದು ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ನೆರವೇರಿತು.

❊ ❊ ❊

ಪೆರ್ಡೂರ್ ಶ್ರೀ ಪದ್ಮನಾಭ ರಾವ್ ಹಾಗೂ ಶ್ರೀಮತಿ ಶ್ಯಾಮಲರವರ ಸುಪುತ್ರಿ **ಪವಿತ್ರ**ಳ ವಿವಾಹವು ಕರ್ವಾಲು ಚಂದ್ರಶೇಖರ್ ರಾವ್ ಮತ್ತು ಶ್ರೀಮತಿ ವಸಂತಿಯವರ ಸುಪುತ್ರ **ಸುಭಾಷ್**ನೊಂದಿಗೆ ತಾರೀಕು 30-8-2013ರಂದು ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ನೆರವೇರಿತು.

❊ ❊ ❊

ತಲ್ಲೂರು ಸತ್ಯಾನಂದ ಶ್ಯಾನುಭೋಗ್ ಮತ್ತು ಶ್ರೀಮತಿ ಶಶಿಕಲಾ ಶ್ಯಾನುಭೋಗ್‌ರವರ ಸುಪುತ್ರ **ಶೈಲೇಶ್**ನ ವಿವಾಹವು ಕೂಡ್ಲು ಸದಾಶಿವ ಶ್ಯಾನುಭೋಗ್ ಮತ್ತು ಮೋಹಿನಿ ಶ್ಯಾನುಭೋಗ್‌ರ ಸುಪುತ್ರಿ **ಮೌಸಾಮಿ**ಯ ವಿವಾಹವು ತಾರೀಕು 6-9-2013ರಂದು ಕಾಸರಗೋಡಿನ ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ನಡೆದು ನೂತನ ವಧೂವರರ ಗೃಹಪ್ರವೇಶ ಕಾರ್ಯಕ್ರಮವು ತಾರೀಕು 7-9-2013ರಂದು ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ನೆರವೇರಿತು.


*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Oznam Complex**
**Church Building, Main Road**
**BAJPE, MANGALORE**




## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಸಮಾಜ ಬಾಂಧವರೇ,

ಯಶಸ್ವಿ 2ನೇ ವರುಷದಲ್ಲಿ ಸಾಗುತ್ತಿರುವ 'ಜ್ಞಾನಶಕ್ತಿ' ಮಾಸಪತ್ರಿಕೆಯನ್ನು ಸದಾಕಾಲ ನಿಮಗೆ ನೀಡುವ ಉದ್ದೇಶದಿಂದ ಪತ್ರಿಕೆಗೆ ಈ ಕೆಳಗಿನಂತೆ ಚಂದಾದರವನ್ನು ನಿಗದಿಪಡಿಸಲಾಗಿದೆ.



| | | |
|---|---|---|
| **ಮಹಾ ಪೋಷಕರು** | – | ರೂ. 10,000/– |
| **ಪೋಷಕರು** | – | ರೂ. 5,000/– |
| **ಆಜೀವ ಚಂದಾ ದರ** | – | ರೂ. 500/– |
| **ವಾರ್ಷಿಕ ಚಂದಾ ದರ** | – | ರೂ. 100/– |

**ಹೆಚ್ಚಿನ ಮಾಹಿತಿಗಾಗಿ**

**ಶ್ರೀ ಪಿ. ಶ್ರೀಕಾಂತ ರಾವ್**
**9343361618**

**ಶ್ರೀ ಅನಿಲ್ ರಾವ್ ಬಿ. ಎಸ್.**
**9880037110**

ಸಮಾಜ ಬಾಂಧವರು ತಮ್ಮ ಚಂದಾದರವನ್ನು ಆದಷ್ಟು ಶೀಘ್ರ ನೀಡಿ ಹಾಗೂ ಪರ ಊರಿನ ಸಮಾಜ ಬಾಂಧವರನ್ನು ಚಂದಾದಾರರಾಗಲು ಪ್ರೇರೇಪಿಸಿ ಸಹಕರಿಸಬೇಕಾಗಿ ವಿನಂತಿ. ಚೆಕ್ ಅಥವಾ ಡಿ. ಡಿ. ನೀಡುವವರು 'ಜ್ಞಾನಶಕ್ತಿ' ಹೆಸರಿನ ಮೂಲಕ ಶ್ರೀ ಸಭಾಕ್ಕೆ ಕಳುಹಿಸಿಕೊಡಬಹುದು.


ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**





**ರಾಮಾ ಅಟೋಮೊಬೈಲ್ಸ್**



**ಮಾರುತಿ ವಾಹನ ತಜ್ಞರು**



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**
ಫೋನ್ : 0824 - 2454355, ಮೊಬೈಲ್ : 9448545702

**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**





**PRAMOD**
**AUTOMOBILES**
**KARANGALPADY**
**MANGALORE- 575 003**

30 Years of Service

Ph. : 2493633 (O)
2212723 (R)
M. : 9448260225

**Wholesale & Retail Dealers in**
**2 & 3 WHEELERS SPARES & ACCESSORIES**

**Prop. : Ln. K. HARSHA KUMAR**

# ಕಾಸರಗೋಡು ಶಿವಬ್ರಾಹ್ಮಣ ಸಭಾದ ಅಧ್ಯಕ್ಷರಾದ ಡಾ। ಯಂ. ಸತ್ಯನಾಥ್‌ರವರಿಗೆ ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ ವತಿಯಿಂದ ಸನ್ಮಾನ




ಸುಮಾರು 36 ವರುಷಗಳಿಂದ ಕಾಸರಗೋಡಿನ ಬಳಿಯ ಕಲನಾಡಿನಲ್ಲಿರುವ 'ಕಲನಾಡು ನರ್ಸಿಂಗ್ ಹೋಂ'ನಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಶಿವಬ್ರಾಹ್ಮಣ ಸಭಾದ ಅಧ್ಯಕ್ಷರಾದ ಡಾ। ಯಂ. ಸತ್ಯನಾಥರವರನ್ನು ಕಾಸರಗೋಡಿನ ಐ.ಎಮ್.ಎ. ಘಟಕ ವೈದ್ಯಕೀಯ ಮತ್ತು ಸಮಾಜಸೇವೆಗೆ ಸನ್ಮಾನಿಸಿದರು. ಜುಲೈ 1ರಂದು ಜರಗಿದ ಈ ಸಮಾರಂಭಕ್ಕೆ ಕಾಸರಗೋಡು ಐ.ಎಮ್.ಎ.ಯ ಅಧ್ಯಕ್ಷ ಡಾ। ಸುರೇಶ್ ಬಾಬು ಅಧ್ಯಕ್ಷತೆ ವಹಿಸಿದರು. ಕಾರ್ಯದರ್ಶಿ ಡಾ। ಅಬ್ದುಲ್ ಸತ್ತಾರ್, ಹಿರಿಯ ವೈದ್ಯರುಗಳಾದ ಡಾ। ಬಿ. ಯಸ್. ರಾವ್, ಡಾ। ಕೆ. ಕೆ. ಶ್ಯಾನುಭೋಗ್, ಡಾ। ಪಿ. ಯಸ್. ಯನ್. ಭಟ್ ಮುಂತಾದವರು ಮಾತನಾಡಿದರು. ಈ ಸಂದರ್ಭದಲ್ಲಿ ಕಾಸರಗೋಡು ಜಿಲ್ಲೆಯ 200ಕ್ಕಿಂತಲೂ ಹೆಚ್ಚು ಮಂದಿ ವೈದ್ಯರುಗಳು ತಮ್ಮ ಕುಟುಂಬದೊಂದಿಗೆ ಉಪಸ್ಥಿತರಿದ್ದರು.

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಋಗುಪಾಕರ್ಮ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾರೀಕು 20-08-2013ರಂದು ಬೆಳಗ್ಗೆ 6-00 ಗಂಟೆಗೆ ಋಗುಪಾಕರ್ಮ ನೆರವೇರಿತು. ಪಾವಂಜೆ ಶ್ರೀ ವಾಸುದೇವ ಉಪಾಧ್ಯಾಯರು ಹೋಮ ಹವನಗಳನ್ನು ನೆರವೇರಿಸಿದರು. ಶ್ರೀ ಸಭಾದ ಪದಾಧಿಕಾರಿಗಳಾದ ಶ್ರೀ ಕರುಣ್ ರಾವ್ ಬೆಳ್ಳೆ, ಡಾ। ಎ. ಪಿ. ಕೃಷ್ಣ, ಶ್ರೀ ಅನಿಲ್ ರಾವ್ ಬಿ. ಎಸ್., ಶ್ರೀ ಪಿ. ಶ್ರೀಕಾಂತ್ ರಾವ್ ಸಹಿತ ನೂರಾರು ಸಮಾಜ ಬಾಂಧವರು ಭಾಗವಹಿಸಿದ್ದರು.

***ಚಿತ್ರ : ಶ್ರೀ ರಘುವೀರ್ ಪೆರ್ಡೂರು***

PREETHIKA AUTOMOBILES
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
2493633
9845851573
Dealers in :
Minda Switches, M. K. Products, Swiss Auto Products, Power Coils

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)



# LL.M.ನಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ ಕು। ಪ್ರೀತಿಕಾ ಪಿಲಿಂಜ - ಪುತ್ತೂರು



ಭಾರತದ ಪ್ರತಿಷ್ಠಿತ ನೇಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯ, ಬೆಂಗಳೂರು ಇದರ ವಿದ್ಯಾರ್ಥಿನಿ ನಮ್ಮವರೇ ಆದ ಪ್ರೀತಿಕಾ ಪಿಲಿಂಜ ಅವರು ಅಂತಿಮ ಎಲ್.ಎಲ್.ಎಂ. ಪರೀಕ್ಷೆಯಲ್ಲಿ 2012-2013ನೇ ಸಾಲಿನಲ್ಲಿ ಅತ್ಯಂತ ಗರಿಷ್ಟ ಅಂಕ ಗಳಿಸಿ ಪ್ರಥಮ ರ್‍ಯಾಂಕ್ ಹಾಗೂ 2 ಚಿನ್ನದ ಪದಕಗಳನ್ನು ಗಳಿಸಿದ್ದಾರೆ. ವಿಶ್ವವಿದ್ಯಾಲಯದ ಕುಲಪತಿಗಳಾದ ಭಾರತದ ಗೌರವಾನ್ವಿತ ಉಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರಾದ ಪಿ. ಸದಾಶಿವಂ ಅವರು ಕೇಂದ್ರ ಸರಕಾರದ ಕಾನೂನು ಮಾಹಿತಿ ಹಾಗೂ ತಂತ್ರಜ್ಞಾನದ ಕ್ಯಾಬಿನೆಟ್ ಸಚಿವರಾದ ಗೌರವಾನ್ವಿತ ಕಪಿಲ್ ಸಿಬಲ್ ಅವರ ಉಪಸ್ಥಿತಿಯಲ್ಲಿ ಸಪ್ಟಂಬರ್ 1ನೇ ತಾರೀಕಿನಂದು ಬೆಂಗಳೂರಿನಲ್ಲಿ ನಡೆದ ಪದಪ್ರದಾನ ಸಮಾರಂಭದಲ್ಲಿ ಕುಮಾರಿ ಪ್ರೀತಿಕಾ ಅವರನ್ನು ವಿಶೇಷವಾಗಿ ಗೌರವಿಸಿರುತ್ತಾರೆ.

ಎಳವೆಯಿಂದಲೇ ಪ್ರೀತಿಕಾ ಅತ್ಯಂತ ಪ್ರತಿಭಾವಂತೆ. ಬಹುಮುಖ ಪ್ರತಿಭೆಯ ಇವರು ಶಾಲಾ ದಿನಗಳಲ್ಲಿ ಕ್ವಿಜ್, ಭಾಷಣ ಸ್ಪರ್ಧೆ, ಲೇಖನ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಅವರ ಲೇಖನಗಳು ಶಾಲಾ ವಾರ್ಷಿಕ ಸಂಚಿಕೆಗಳಲ್ಲಿ ಹಾಗೂ ವಿಜಯ ಕರ್ನಾಟಕ ಮುಂತಾದ ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುವು. ರಾಜಕೀಯ ಹಾಗೂ ರಾಜಕಾರಣಿಗಳ ನಡೆನುಡಿಗಳನ್ನು ಚಿಕಿತ್ಸಕ ದೃಷ್ಟಿಯಿಂದ ಗಮನಿಸುವುದು ಇವರ ಹೆಚ್ಚುವರಿ ಹವ್ಯಾಸ.

ಶಾಲಾ ದಿನಗಳಲ್ಲಿ ಬಹುಮುಖ ಪ್ರತಿಭೆಯ ಪ್ರೀತಿಕಾ ಅವರು ಸ್ಪರ್ಧಿಸದ ಸ್ಪರ್ಧೆಗಳಿಲ್ಲ. ಗಳಿಸಿದ ಬಹುಮಾನಗಳು ಮನೆತುಂಬಾ, ಮಾತಾಪಿತೃಗಳ, ಹಿತೈಷಿಗಳ ಮನತುಂಬಾ.

ಸಿ.ಇ.ಟಿ.ಯಲ್ಲಿ ಉತ್ತಮ ರ್‍ಯಾಂಕ್ ಗಳಿಸಿ ಮೆಡಿಕಲ್, ಇಂಜಿನಿಯರಿಂಗ್ ಮುಂತಾದ 'ಮನಿ ಪ್ಲ್ಯಾಂಟ್'ಗಳು ಇವರನ್ನು ಕೈಬೀಸಿ ಕರೆಯುತ್ತಿದ್ದರೂ, ತನ್ನ ಆಸಕ್ತಿಯ ಕಾನೂನು ವಿದ್ಯಾರ್ಜನೆಗೆ ಮನ ಮಾಡಿದವರು ಇವರು. ಸುಲಭವಾಗಿ ಮತ್ತು ಅರ್ಹವಾಗಿ ಪ್ರತಿಷ್ಠಿತ 'ನೇಶನಲ್ ಲಾ ಕಾಲೇಜು ಆಫ್ ಇಂಡಿಯಾ' ಇದರಲ್ಲಿ ಪ್ರವೇಶ ದೊರಕಿಸಿಕೊಂಡರು. ಅಲ್ಲಿ ತನ್ನ ಪ್ರತಿಭೆಯನ್ನು ಪೂರ್ಣವಾಗಿ ಅರಳಿಸಿಕೊಂಡು ಎರಡು ಚಿನ್ನದ ಪದಕ ಗಳಿಸುವುದರ ಮೂಲಕ ನಮ್ಮ ಸಮಾಜಕ್ಕೆ, ನಮ್ಮ ಊರಿಗೆ ಗೌರವವನ್ನು ತಂದಿದ್ದಾರೆ.

ಕು। ಪ್ರೀತಿಕಾ ಅವರನ್ನು ಮತ್ತು ಅವರ ಆಸಕ್ತಿಯನ್ನು ಅವಿರತವಾಗಿ ಪ್ರೋತ್ಸಾಹಿಸಿದ ಅವರ ಮಾತಾಪಿತೃಗಳಾದ ನಿವೃತ್ತ ಯೋಧ ಹಾಗೂ ಕೆನರಾ ಬ್ಯಾಂಕಿನ ಅಧಿಕಾರಿ ದರ್ಬೆಯ ತುಳಸೀದಾಸ ಪಿಲಿಂಜ ಹಾಗೂ ಸಾವಿತ್ರಿಯವರು ವಿಶೇಷವಾಗಿ ಅಭಿನಂದನಾರ್ಹರು.

ಹೆತ್ತವರಿಗೆ ಹಾಗೂ ಸಮಾಜಕ್ಕೆ ತನ್ನ ಸಾಧನೆಯಿಂದ ಗೌರವವನ್ನು ತಂದುಕೊಟ್ಟ ಚಿನ್ನದ ಹುಡುಗಿ ಕುಮಾರಿ ಪ್ರೀತಿಕಾ ಪಿಲಿಂಜ ಅವರಿಗೆ ಸ್ಥಾನಿಕ ಸಮಾಜದ ಪರವಾಗಿ **'ಜ್ಞಾನಶಕ್ತಿ'** ಪತ್ರಿಕೆಯು ಶುಭವನ್ನು ಹಾರೈಸುತ್ತದೆ.

***ವರದಿ : ಎಂ. ಎಸ್. ರಘುನಾಥ ರಾವ್,*** *ಪ್ರಧಾನ ಸಂಪಾದಕ*

SHARMA ENTERPRISES
KANKANADY, MANGALORE - 575 002
Mob. : 9844187083
Prop. :
Chethan Sharma

## ವಧೂವರರ ವಿವಾಹ ವೇದಿಕೆ



**ನಮ್ಮ ಸಮಾಜ ಬಾಂಧವರ ಗಮನಕ್ಕೆ -**

ವಧೂವರರ ವಿವಾಹ ವೇದಿಕೆಯನ್ನು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಪ್ರಾರಂಭಿಸಿ, ಇದರ ಉಪಯುಕ್ತತೆಯನ್ನು ನಮ್ಮ ಸಮಾಜ ಬಾಂಧವರು ಪಡೆದುಕೊಂಡಿದ್ದಾರೆ. ಇನ್ನು ಮುಂದೆಯೂ ಈ ವೇದಿಕೆಯ ಸದುಪಯೋಗ ಪಡೆದುಕೊಳ್ಳಬಹುದು.

*ಸಂಪರ್ಕಿಸಿರಿ :*

ಶ್ರೀ ಚೇತನ್ ಶರ್ಮ : 9844187083
ಶ್ರೀ ಎನ್. ಶಶಿಕಾಂತ್ : 9341988753
ಶ್ರೀಮತಿ ವೈಜಯಂತಿ ರಾವ್ ಬೆಳ್ಳೆ : 9242204848

E-mail : gbicsm@gmail.com

## 'ನಮ್ಮ ಸಾಧಕರು'



# ದಿವ್ಯಾ ರಾವ್

ಫ್ಯಾಶನ್ ಜಗತ್ತಿನಲ್ಲಿ ಅಪರೂಪದ ಪ್ರತಿಭೆ ನಮ್ಮ ಸಮಾಜದ ದಿವ್ಯಾ ರಾವ್ ನಾಸಿಕ್‌ನಲ್ಲಿ ನೆಲೆಸಿರುವ ಶ್ರೀ ರಂಗರಾವ್ ಮತ್ತು ಅರುಣಾ ರಾವ್‌ರವರ ಸುಪುತ್ರಿ. ತನ್ನ ಬಿ.ಕಾಂ. ನಂತರ ತನ್ನ ಇಚ್ಛೆಯ ಫ್ಯಾಶನ್ ಡಿಸೈನಿಂಗ್ ಕ್ಷೇತ್ರವನ್ನು ಆರಿಸಿದ ಈಕೆ ನಾಸಿಕ್‌ನ ಎನ್.ಐ.ಎಫ್.ಡಿ. ಕಾಲೇಜಿನಲ್ಲಿ ಫ್ಯಾಶನ್ ಜಗತ್ತಿನ ಬಗ್ಗೆ ತಿಳಿದುಕೊಂಡು ತನ್ನ ಅಗಾಧ ಕನಸನ್ನು ನನಸಾಗಿಸಲು ಮೆಲ್ಬೋರ್ನ್‌ನಲ್ಲಿರುವ ಆರ್.ಎಮ್.ಆರ್.ಟಿ. ಕಾಲೇಜಿನಲ್ಲಿ ಆಳವಾದ ಜ್ಞಾನ ಸಂಪಾದಿಸಿದರು.

ತನ್ನ ಮಹತ್ವಾಕಾಂಕ್ಷೆಯಾದ ಸ್ವಂತ ಹೆಸರಿನ ಲೇಬಲ್‌ನಲ್ಲಿ ಫ್ಯಾಶನ್ ಡಿಸೈನಿಂಗ್ ಪ್ರವೇಶಿಸುವ ಆಕೆಯ ಹಂಬಲ 2012ರ ಮೆಲ್ಬೋರ್ನ್ ಪ್ರದರ್ಶನದಲ್ಲಿ 'ಸಿಲ್ಕ್ ರೂಟ್' ಎಂಬ ಹೆಸರಿನೊಂದಿಗೆ ಪ್ರದರ್ಶಿಸಲಾಯಿತು. ಈ ಮೂಲಕ ಮಾರುಕಟ್ಟೆಯನ್ನು ಪ್ರವೇಶಿಸಿದ ಈಕೆಯ ಉಡುಪುಗಳು ಜಗತ್ತಿನಾದ್ಯಂತ ಬೇಡಿಕೆ ಪಡೆಯಿತು. ಪ್ಯಾರಿಸ್‌ನ ಫ್ಯಾಶನ್ ಮೇಳದಲ್ಲಿ ಭಾಗವಹಿಸಿದ ಈಕೆಯ ಉಡುಪುಗಳು ಭಾರತೀಯ ಸಂಸ್ಕೃತಿಯ ಎಳೆಯನ್ನು ಪಡೆದಿದ್ದು ತನ್ನ ಮಾತೃಭೂಮಿ ಭಾರತದಲ್ಲೂ ತನ್ನ ಮಾರುಕಟ್ಟೆ ವಿಸ್ತರಿಸುವ ಹಂಬಲ ಈಕೆಯದ್ದು. ಆಸ್ಟ್ರೇಲಿಯಾದ್ಯಂತ ಬೇಡಿಕೆ ಪಡೆದಿರುವ ಈಕೆಯ ಫ್ಯಾಶನ್ ಉಡುಪುಗಳು ಭಾರತದಲ್ಲೂ ಬೇಡಿಕೆ ಪಡೆಯುವಂತಾಗಲಿ ಎಂದು ಹಾರೈಸುತ್ತಿದೆ **'ಜ್ಞಾನಶಕ್ತಿ ಬಳಗ'**.

# ಅಪಾರ ಕೀರ್ತಿ ಗಳಿಸಿ...



ಉಡುಪಿಯ ಪ್ರೊ. ಸಾಂತೂರು ಸುಬ್ರಹ್ಮಣ್ಯ ಮತ್ತು ಶ್ರೀಮತಿ ವೇದಾವತಿಯವರ ಪುತ್ರಿ ಕು. ಪೂಜಾ ರಾವ್ ದಿಲ್ಲಿಯ ಸ್ಕೂಲ್ ಆಫ್ ಪ್ಲಾನಿಂಗ್ ಆರ್ಕಿಟೆಕ್ಚರ್‌ನಲ್ಲಿ ಪ್ರಥಮ ಶ್ರೇಣಿಯಲ್ಲಿ ಗರಿಷ್ಟ ಅಂಕ ಪಡೆದು ಪದವಿ ಮುಗಿಸಿದ್ದು GATE - 2013ರಲ್ಲಿ 15ನೇ ರ್‍ಯಾಂಕ್ ಪಡೆದು ಇದೀಗ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ CISTUPನಲ್ಲಿ ಪ್ರೊಜೆಕ್ಟ್ ಅಸಿಸ್ಟೆಂಟ್ ಆಗಿದ್ದಾಳೆ.

## ಕವನ

ಸಾಯುವುದು ಖಚಿತವಾದಲ್ಲಿ
ನಡೆದು ನರಸಿಂಹನ ಕಾಣು
ಸಿದ್ಧ ಸಾಧ್ಯರು ನಡೆದ ಭೂಮಿಯಲಿ
ಶಂಕರರು ದರ್ಶಿಸಿದ ಗುಡ್ಡಗಾಡಿನಲಿ
ಅವರ ಪದತಲದ ಧೂಳಿಯಲಿ
ತುಂಗೆಯ ವನದಲ್ಲಿ
ತುಂಗೆಯ ದಡದಲ್ಲಿ
ಗುರು ಅರ್ಚಿತ ಅಭಿಷೇಕ ಜಲದಿ ಮಿಂದ
ತರುಲತೆ ಪುಷ್ಪ ಪರಿಮಳದ ಪರಿಧಿಯಲಿ
ಬಿದ್ದು ಹೋಗಲಿ ದೇಹ
ಬಿಟ್ಟು ಹೋಗಲಿ ಆತ್ಮ ನರಸಿಂಹನೆಡೆಗೆ

ಸಾಯುವುದು ಖಚಿತವಾದಲ್ಲಿ
ನರಸಿಂಹನ ಸೇರು
ತುಂಗೆಯ ಅಂಕುಡೊಂಕು
ಬೆಳೆದ ಸಸಿ ಹರಿದ್ವರ್ಣ
ಕಂಪುತಂಪುಗಳ ಪಾರ್ಶ್ವ
ಸೊಯ್ಯನೆ ಬೀಸುವ ಮಾರುತನ ಬಿತ್ತರ
ಪರುವತದ ಎತ್ತರ ಆಳದಾಳದಕಣಿವೆ
ಎಂತೆಂತೋ ಬೆಳೆದ ವೃಕ್ಷಗಳ
ವಿಶಾಲ ಛತ್ರದಡಿಯಲ್ಲಿ ಚಾಚುತ್ತ
ಕಳೆಯಲೀ ದೇಹ ಬಿದ್ದಾಡಿ ಗುದ್ದಾಡಿ
ಪಡೆಯಲಿ ಪರಮಚೇತನದರಿವ

ಸಾಯುವುದು ಖಚಿತವಾದಲ್ಲಿ
ನರಸಿಂಹವನದೆಡೆಗೆ ಸಾಗು
ಅಂಗುಲಂಗುಲದಲಿ ಕಾಣ್ವ
ಗುರುಬಿಂಬದಲಿ ಬೆಳಗುವ
ಶಾರದೆಯ ಮಂದಹಾಸದಲಿ
ತುಂಗೆಯ ಉದ್ದಗಲದಲಿ
ಕೊಂಬೆಕೊಂಬೆಗಳ ಸಪ್ಪಳದಲಿ
ಬಂದೆಲ್ಲ ಅವಧೂತರ ಅಳೆದಳೆದ ಹೆಜ್ಜೆಗಳಲಿ
ಮಿಳಿತ ಸಂದೇಶ ಮಧುರ ವಚನಾಮೃತಗಳಲಿ ತೂರಿ
ಓಲಾಡಿ ಅಡ್ಡಾಡಿ ಸುಂದರ ಸಮಾಧಿಯಲಿ
ಪೊಳೆವ ಚಂದಿರನ ಬೆಳದಿಂಗಳಿನಲಿ
ನೀಲಗಗನದಲಿ ಮಿನುಗುವ ನಕ್ಷತ್ರರಾಶಿಗಳಲಿ
ಅರ್ಪಣವಾಗಲಿ ತನುಮನ ಇಂದ್ರಿಯಕರಣ
ವಿಶಾಲವಿಶ್ವದಲಿ ಮಾಯವಾಗಲಿ ಕರಗಿ ಪೋಗಲಿ
ಅಸ್ತಿತ್ವ ಪಂಚತತ್ವದಲಿ ಸೇರಿ.

***ಎಂ. ಆರ್. ವಾಸುದೇವ, ಮಂಗಳೂರು***

## ವೈದಿಕ ಶಿಬಿರ

ತಾ. 16-10-2013ರಿಂದ 23-10-2013ರ ವರೆಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಮಕ್ಕಳ ವೈದಿಕ ಶಿಬಿರವು ನಡೆಯಲಿದೆ. ಶಿಬಿರದಲ್ಲಿ ಉಪನ್ಯಾಸದ ನಿಮಿತ್ತ ವೈದಿಕ ಅರ್ಚಕರು ಭಾಗವಹಿಸಲಿದ್ದಾರೆ. ಶಿಬಿರಾರ್ಥಿಗಳು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

**ಸೂಚನೆ :**

- ಶಿಬಿರಾರ್ಥಿಗಳು ಊಟೋಪಚಾರ ಹಾಗೂ ಉಳಕೊಳ್ಳಲು ವ್ಯವಸ್ಥೆ ಇದೆ.
- ಶಿಬಿರಾರ್ಥಿಗಳು ಕೌಳಿಗೆ ಸೌಟು, ಹರಿವಾಣ ಹಾಗೂ ದಿನನಿತ್ಯದ ವಸ್ತುಗಳನ್ನು ತರತಕ್ಕದ್ದು.
- ಜಪ ಮತ್ತು ಪೂಜಾ ವಿಧಾನ ಕಲಿಯಬಯಸುವ ದೊಡ್ಡವರಿಗೂ ಅವಕಾಶವಿದೆ.

**ಮಾಹಿತಿಗಾಗಿ ಸಂಪರ್ಕಿಸಿ :**

**ಕೃಷ್ಣರಾಜ ಭಟ್ - 9980195355   ಸುಧಾಕರ ಬೆಳ್ಳೆ - 9845193103**

**ಕಾರ್ಯಕ್ರಮದ ಪ್ರಾಯೋಜಕರು :**

- **ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ, ಮಹಿಳಾ ವೇದಿಕೆ ಮತ್ತು**
- **ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮಂಡಳಿ, ಪಾದೆಬೆಟ್ಟು**

**ಇವರು ನಮ್ಮವರು**



# ಮಂಗಳೂರು ತಾಲೂಕು ತಹಶೀಲ್ದಾರ್ ಮತ್ತು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಶ್ರೀ ಕ್ಯೊಲ ಮೋಹನ ರಾವ್

1977ರಲ್ಲಿ ಪುತ್ತೂರಿನಲ್ಲಿ ತನ್ನ ಸರಕಾರಿ ಸೇವೆಯನ್ನು ಪ್ರಾರಂಭಿಸಿದ ಶ್ರೀ ಮೋಹನರಾಯರು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ 1981ರಿಂದ ಭೂಸುಧಾರಣಾ ಶಾಖೆ, ಆಡಳಿತ ಶಾಖೆ, ಅರಣ್ಯ ವ್ಯವಸ್ಥಾಪನಾ ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿ ಅಪಾರ ಅನುಭವ ಪಡೆದವರು. 1988ರಲ್ಲಿ ಬೆಳ್ತಂಗಡಿಯ ಅಳದಂಗಡಿಯಲ್ಲಿ ಮಂಡಲ ಪಂಚಾಯತ್ ಕಾರ್ಯದರ್ಶಿಯಾಗಿ ಪಂಚಾಯತ್‌ಗೆ ದಾಖಲೆ ಆದಾಯದ ಕ್ರೋಢೀಕರಣ ಮಾಡಿದವರು. 1992-'93ರಲ್ಲಿ ಕಂದಾಯ ನಿರೀಕ್ಷಕ, 1992-'93ರಲ್ಲಿ ಸಹಾಯಕ ಕಮೀಷನರ ಕಛೇರಿಯಲ್ಲಿ ವ್ಯವಸ್ಥಾಪಕ, 1993-2004ರಲ್ಲಿ ಬಂಟ್ವಾಳ ತಾಲೂಕು ಕಛೇರಿಯಲ್ಲಿ ಶಿರಸ್ತೇದಾರ, 2004-2005ರಲ್ಲಿ ಪುತ್ತೂರಿನಲ್ಲಿ **'ಭೂಮಿ'** ಶಿರಸ್ತೇದಾರ, 2005ರಲ್ಲಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಬಳಿಕ ಮಂಗಳೂರು ತಾಲೂಕು ಕಛೇರಿಯಲ್ಲಿ ಚುನಾವಣಾ ಶಿರಸ್ತೇದಾರ ಹೀಗೆ ಕಂದಾಯ ಇಲಾಖೆ ಮತ್ತು ಇತರ ಇಲಾಖೆಗಳಲ್ಲಿ ತಳಮಟ್ಟದ ಅನುಭವವನ್ನು ಪಡೆದವರು ಶ್ರೀ ಮೋಹನರಾಯರು.

2009ರಿಂದ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕಂದಾಯ ವಿಭಾಗದ ಅಧೀಕ್ಷಕರಾಗಿ ಕರ್ನಾಟಕದಲ್ಲಿಯೇ ಪ್ರಪ್ರಥಮ ಬಾರಿಗೆ ಕಾಗದರಹಿತ ಕಛೇರಿ (P.L.O.) ಅನುಷ್ಠಾನದಲ್ಲಿ ಮಹತ್ತರ ಪಾತ್ರ ವಹಿಸಿದವರು.

ಸರಕಾರದ ಹಲವಾರು ಆಡಳಿತ ಸುಧಾರಣೆಗಳಲ್ಲಿ ಮೋಹನರಾಯರ ಕೊಡುಗೆ ದಾಖಲಿಸುವಂತಹದ್ದು. ಕರ್ನಾಟಕ ಸರಕಾರದ ಪ್ರತಿಷ್ಠಿತ 'ಭೂಮಿ' ಯೋಜನೆಯಲ್ಲಿ ಗಣಕೀಕೃತ ಪಹಣಿ (Computerised R.T.C.) ಅಳವಡಿಕೆಯಲ್ಲಿ ಶ್ರೀಯುತರದ್ದು ಮಹತ್ವದ ಪಾತ್ರ. ರಾಜ್ಯಮಟ್ಟದ 'ಭೂಮಿ' ಸಲಹಾ ಮಂಡಳಿಯ 19 ಜನ ಸದಸ್ಯರಲ್ಲಿ ಶ್ರೀ ಮೋಹನರಾಯರು ಒಬ್ಬರು. ರಾಜ್ಯಮಟ್ಟದ ಕೃಷಿಯೇತರ ಜಮೀನುಗಳನ್ನು ಕಟ್ಟಡ ಭೂಮಿಗಳನ್ನು **'ಭೂಮಿ'** ವ್ಯವಸ್ಥೆಯೊಳಗೆ ಅಳವಡಿಸಲು ಸಂಪನ್ಮೂಲ ವ್ಯಕ್ತಿಯಾಗಿ ರಾಜ್ಯದಾದ್ಯಂತ ಇಲಾಖೆಯ ವಿವಿಧ ಅಧಿಕಾರಿಗಳನ್ನು ತರಬೇತಿಗೊಳಿಸುವ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಯುತರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಮಂಗಳೂರಿನ ಸರಕಾರಿ ನೌಕರ ತರಬೇತಿ ಸಂಸ್ಥೆಯಲ್ಲಿ ಗೌರವ ಉಪನ್ಯಾಸಕ - ಸಂಪನ್ಮೂಲವ್ಯಕ್ತಿಯಾಗಿ ಕೆಲಸ ಮಾಡಿದವರು.

ಶ್ರೀ ಮೋಹನ್ ರಾವ್ ಅವರು 2013ರಿಂದ ತಹಶೀಲ್ದಾರರಾಗಿ ಪದೋನ್ನತಿ ಹೊಂದಿ ದ. ಕ. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ 'ಶಿಷ್ಟಾಚಾರ ತಹಶೀಲ್ದಾರ್' ಹುದ್ದೆಯನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸುತ್ತಿದ್ದು ಕಂದಾಯ ವಿಭಾಗ ಹಾಗೂ ಜಿಲ್ಲೆಯ ಆಡಳಿತ ವಿಭಾಗದ ಹೆಚ್ಚುವರಿ ಹೊಣೆಯನ್ನೂ ನಿರ್ವಹಿಸುತ್ತಿದ್ದಾರೆ.

**ತಹಶೀಲ್ದಾರ್ ಗ್ರೇಡ್ - 1 ಆಗಿರುವ ಶ್ರೀ ಮೋಹನರಾಯರು ಪ್ರಸ್ತುತ ಆಗಸ್ಟ್ 31ರಿಂದ ಮಂಗಳೂರು ತಹಶೀಲ್ದಾರ್ ಮತ್ತು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಆಗಿ ಬಡ್ತಿ ಪಡೆದಿರುವುದು ನಮ್ಮ ಸಮಾಜಕ್ಕೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ.**

ದಕ್ಷ ಸಂಘಟಕರಾದ ಶ್ರೀ ಮೋಹನರಾಯರು ಹಲವಾರು ಸಂಘ–ಸಂಸ್ಥೆಗಳಲ್ಲಿ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. 1993ರಲ್ಲಿ ಬಂಟ್ವಾಳ ತಾಲೂಕು ಕಂದಾಯ ನಿರೀಕ್ಷಕರ ಸಂಘದ ಅಧ್ಯಕ್ಷ, ಜಿಲ್ಲಾ ಸಂಘಟನಾ ಕಾರ್ಯದರ್ಶಿ, ಬಂಟ್ವಾಳ ತಾಲೂಕು ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ, ರಾಮಕುಂಜೇಶ್ವರ ವಿದ್ಯಾವರ್ಧಕ ಸಭಾದ ಗೌರವ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯಕಾರಿ ಆಡಳಿತ ಮಂಡಳಿಯ ಖಾಯಂ ಸದಸ್ಯ. ಹೀಗೆ ವಿವಿಧ ಆಯಾಮಗಳಲ್ಲಿ ಸಾರ್ವಜನಿಕ ಸೇವೆಯಲ್ಲಿ ಸದ್ದಿಲ್ಲದೆ ತನ್ನನ್ನು ತೊಡಗಿಸಿಕೊಂಡವರು ಶ್ರೀ ಮೋಹನರಾಯರು.

ಬಹುಮುಖ ಪ್ರತಿಭೆಯ ಮೋಹನರಾಯರು ಸಾಹಿತ್ಯ, ಸಂಘಟನೆ, ಯಕ್ಷಗಾನ, ನಾಟಕ, ಸಂಗೀತ ಹೀಗೆ ಹಲವು ಕ್ಷೇತ್ರಗಳಲ್ಲಿ ಬಿಡುವಿಲ್ಲದ ತನ್ನ ಕರ್ತವ್ಯದ ಮಧ್ಯೆಯೂ ಬಿಡುವು ಮಾಡಿಕೊಂಡವರು. ಸ್ವತಃ ನಾಟಕ ರಚನೆಗಾರರು, ಕಲಾವಿದರು, ತಾಳ ಮದ್ದಳೆಯಲ್ಲಿ ಪ್ರಸಿದ್ಧ ಕಲಾವಿದರೊಂದಿಗೆ ಅರ್ಥಧಾರಿಯಾಗಿ **'ಸೈ'** ಎನಿಸಿಕೊಂಡವರು.

ಮೈಸೂರು ದಸರಾದಲ್ಲಿ ಜಿಲ್ಲೆಯ ಯಕ್ಷಗಾನ ತಂಡವನ್ನು ಸಂಯೋಜಿಸಿ ಮೈಸೂರು ನಗರದಲ್ಲೂ ಯಕ್ಷಲೋಕವನ್ನು ಪರಿಚಯಿಸಿದವರು. 12ನೇ ದ. ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲಾ ಕಾರ್ಯದರ್ಶಿಯಾಗಿ 2002ರಲ್ಲಿ ಮೈಸೂರು ವಿಭಾಗಮಟ್ಟದ ಜಾನಪದ ಯುವ ಸಮ್ಮೇಳನದಲ್ಲಿ ಕಾರ್ಯಕಾರಿ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, 14ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಖಜಾಂಜಿಯಾಗಿ ಅಧಿಕಾರ ನಿರ್ವಹಿಸುತ್ತಿದ್ದಾರೆ. ಹೀಗೆ ಮೋಹನರಾಯರು ಒಬ್ಬ ಸರಕಾರಿ ಅಧಿಕಾರಿಯಾಗಿ ಒಬ್ಬ ಸಮಾಜಮುಖೀ ವ್ಯಕ್ತಿಯಾಗಿ ಪೂರ್ಣತ್ವದ ಕಡೆಗೆ ನಡೆದವರು.

ಪುತ್ತೂರು ತಾಲೂಕಿನ ಕ್ಯೊಲದ ಶ್ರೀನಿವಾಸ ರಾವ್ ತಾರಾ ದಂಪತಿಗಳ ಹಿರಿಯ ಪುತ್ರರಾದ ಮೋಹನರಾಯರು ಪತ್ನಿ ಪೆರುವಾಜೆ ಶ್ರೀ ರಾಮಕೃಷ್ಣಯ್ಯ ಸುನಂದಾ ದಂಪತಿಗಳ ಪುತ್ರಿ ಶ್ರೀಮತಿ ಗೀತಾ, ಪ್ರತಿಷ್ಠಿತ ಆದಿತ್ಯ ಬಿರ್ಲಾ ಕಂಪೆನಿಯಲ್ಲಿ ಎಂ.ಬಿ.ಎ. ಪದವೀಧರ ಪುತ್ರ ವಿಕಾಸ್ ಮತ್ತು ಇಂಜಿನಿಯರಿಂಗ್ (ಕಂಪ್ಯೂಟರ್ ಸೈನ್ಸ್) ಪದವೀಧರೆ ಪುತ್ರಿ ಕುಮಾರಿ ವರ್ಷಿಣಿಯೊಂದಿಗೆ ಹಾಗೂ ತನ್ನ ಅಪಾರ ಮಿತ್ರರೊಂದಿಗೆ ಸಾರ್ಥಕ ಮತ್ತು ಅರ್ಥಪೂರ್ಣ ಬದುಕನ್ನು ನಡೆಸುತ್ತಿದ್ದಾರೆ.

ಶ್ರೀಯುತರಿಗೆ ಇನ್ನಷ್ಟು ಶ್ರೇಯಸ್ಸನ್ನು 'ಜ್ಞಾನಶಕ್ತಿ' ಪತ್ರಿಕೆಯು ಸಮಾಜದ ಪರವಾಗಿ ಹಾರೈಸುತ್ತದೆ. ಹಾಗೂ ಇಂದಿನ ಅವರ ಪದೋನ್ನತಿಗೆ ಶುಭಹಾರೈಸುತ್ತಿದೆ.

***ಸಂದರ್ಶನ : ಎಂ. ಎಸ್. ರಘುನಾಥ ರಾವ್,*** *ಪ್ರಧಾನ ಸಂಪಾದಕ*

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ ಹಾಗೂ**
**ಶ್ರೀಮತಿ ಆರತಿ ಶರ್ಮ**
**ಪ್ರಮೋದ್ ಟವರ್ಸ್, ಮಂಗಳೂರು**

ಇವರು ನಮ್ಮವರು

## ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿವೃತ್ತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜಿನಿ ಕೆ.



2012ನೇ ಸಾಲಿನ ಅತ್ಯುತ್ತಮ ಶಿಕ್ಷಕಿ ರಾಷ್ಟ್ರಪ್ರಶಸ್ತಿಯನ್ನು ತಾರೀಕು 5-9-2013ರಂದು ಹೊಸದಿಲ್ಲಿಯಲ್ಲಿ ಮಾನ್ಯ ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರಿಂದ ಪಡೆದ **ಶ್ರೀಮತಿ ಸರೋಜಿನಿ**ಯವರು ಗ್ರಾಮೀಣ ಪ್ರದೇಶದಲ್ಲಿ 41ವರ್ಷಗಳ ಸುದೀರ್ಘವಾದ ಸೇವೆ ಸಲ್ಲಿಸಿದ ಅಪರೂಪದ ಶಿಕ್ಷಕಿ. ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕಾಂತಾವರ ಮೂಲದವರಾದ ಶ್ರೀಮತಿ ಸರೋಜಿನಿಯವರು ನಿವೃತ್ತ ಕನ್ನಡ ವಿದ್ವಾನ್ ಕಾಂತಾವರ ಕೆ. ಭೋಜರಾವ್ ಮತ್ತು ಸುಂದರಮ್ಮ ದಂಪತಿಯವರ ಪ್ರಥಮ ಪುತ್ರಿ. 1953ರಲ್ಲಿ ಜನಿಸಿದ ಸರೋಜಿನಿಯವರು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಗಣಪತಿ ಹೈಸ್ಕೂಲ್ ಮತ್ತು ಫಿಶರೀಸ್ ಹೈಸ್ಕೂಲ್, ಪಡುಬಿದ್ರಿ, ಇಲ್ಲಿ ಪೂರೈಸಿ ಮಂಗಳೂರು ತಾಲೂಕಿನ ಕಿನ್ನಿಕಂಬಳದ ರೋಸಮಿಸ್ಟಿಕ ಬೇಸಿಕ್ ಟ್ರೈನಿಂಗ್ ಸ್ಕೂಲ್‌ನಲ್ಲಿ ಟಿ.ಸಿ.ಎಚ್. ಮುಗಿಸಿ 1972ರಲ್ಲಿ ವೃತ್ತಿಜೀವನವನ್ನು ಮುಲ್ಕಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಬಪ್ಪನಾಡು ಇಲ್ಲಿ ಪ್ರಾರಂಭಿಸಿದರು. 1975ರಲ್ಲಿ ವಿವಾಹಿತರಾಗಿ ಪುತ್ತೂರು ತಾಲೂಕಿನ ಮೇನಾಲ ಹಿರಿಯ ಪ್ರಾಥಮಿಕ ಶಾಲೆಗೆ ವರ್ಗಾವಣೆಗೊಂಡು 2007ರ ವರೆಗೆ ಅಲ್ಲೇ ಅಧ್ಯಾಪಕಿಯಾಗಿ ಸೇವೆ ಸಲ್ಲಿಸಿದರು. 2007ರಲ್ಲಿ ನನ್ಯ ಹಿರಿಯ ಪ್ರಾಥಮಿಕ ಶಾಲೆ, ಪುತ್ತೂರು ತಾಲೂಕು ಇಲ್ಲಿಗೆ ಮುಖ್ಯಗುರುಗಳಾಗಿ ಭಡ್ತಿಹೊಂದಿ ಅಲ್ಲಿ ಸೇವೆ ಸಲ್ಲಿಸಿ 2009ರಲ್ಲಿ ಮತ್ತೆ ಈ ಹಿಂದೆ ಸುದೀರ್ಘ ಸೇವೆ ಸಲ್ಲಿಸಿದ ಮೇನಾಲ ದ.ಕ.ಜಿ. ಪಂಚಾಯತ್ ಉನ್ನತ ಹಿರಿಯ ಪ್ರಾಥಮಿಕ ಶಾಲೆಗೆ ವರ್ಗಾವಣೆಗೊಂಡು ಬಂದು ಮೇನಾಲ ಶಾಲೆಯಲ್ಲಿಯೇ ಒಟ್ಟು 37 ವರ್ಷಗಳ ಸೇವೆ ಸಲ್ಲಿಸಿ ದಿನಾಂಕ 30-06-2013ರಂದು ಸೇವಾ ನಿವೃತ್ತಿ ಹೊಂದಿದರು.

ಶ್ರೀಮತಿ ಸರೋಜಿನಿಯವರು ತಾನು ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ ಎಲ್ಲಾ ಶಾಲೆಗಳ ಕುಂದುಕೊರತೆಗಳನ್ನು ನೀಗಿಸಿ ಶಾಲೆಗೆ ಮೂಲಭೂತ ಸೌಕರ್ಯವನ್ನು ಒದಗಿಸುವುದರಲ್ಲಿ ಸಾರ್ವಜನಿಕ ಮತ್ತು ಸರಕಾರದ ನೆರವನ್ನು ಪಡೆದು ವಿಶೇಷ ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಶ್ರಮಿಸಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ ವಿಶಾಲವಾದ ಆಟದ ಮೈದಾನ ರಚನೆ, ನನ್ಯ ಮತ್ತು ಮೇನಾಲ ಶಾಲೆಯಲ್ಲಿ ರಂಗಮಂದಿರಗಳು, ಶಾಲೆಗೆ ರಸ್ತೆ ನಿರ್ಮಾಣ, ಸುವರ್ಣ ಜಲ ಕೊಳವೆಬಾವಿ, ನಳ್ಳಿ ನೀರಿನ ವ್ಯವಸ್ಥೆ, ಪೀಠೋಪಕರಣಗಳು ತೆಂಗಿನ ತೋಟ, ತರಕಾರಿ ತೋಟ, ಶಾಲಾ ಪ್ರವೇಶದ್ವಾರ, ಶಾಲಾ ಕಂಪೌಂಡ್ ರಚನೆ ಇವೆಲ್ಲವನ್ನು ವಿಶೇಷ ಶ್ರಮವಹಿಸಿ ಸಾಧಿಸಿದ್ದಾರೆ. ಮೇನಾಲದಲ್ಲಿ ಮತ್ತು ನನ್ಯ ಈ ಎರಡೂ ಶಾಲೆಗಳಲ್ಲಿ ಸುವರ್ಣ ಮಹೋತ್ಸವವನ್ನು ಅದ್ದೂರಿಯಾಗಿ ನಡೆಸಿದ ಹಿರಿಮೆ ಅವರದು. ಅತ್ಯುತ್ತಮ ಶಿಕ್ಷಕಿಯಾಗಿ ಪಾಠ ಪ್ರವಚನಗಳಲ್ಲಿ ತೊಡಗಿಸಿಕೊಂಡಿರುವ ಶ್ರೀಮತಿ ಸರೋಜಿನಿಯವರು ಶೈಕ್ಷಣಿಕ ಅಭಿವೃದ್ಧಿಯ ನಿಟ್ಟಿನಲ್ಲಿಯೂ ಶ್ರಮಿಸಿದ್ದಾರೆ. ಶೈಕ್ಷಣಿಕ ಕಾರ್ಯಾಗಾರಗಳು, ಎನ್.ಎಸ್.ಎಸ್. ಶಿಬಿರಗಳು, ವಾರ್ಷಿಕೋತ್ಸವಗಳು, ಪ್ರತಿಭಾ ಕಾರಂಜಿಗಳು, ಎಸ್. ಡಿ. ಎಂ. ಸಿ, ತರಬೇತಿ ಕಾರ್ಯಾಗಾರಗಳು, ತಾಲೂಕುಮಟ್ಟದ ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ ವ್ಯಕ್ತಿತ್ವ ವಿಕಸನ ಕಾರ್ಯಾಗಾರಗಳು, ಆರೋಗ್ಯ ಶಿಬಿರಗಳು, ಚಿತ್ರಕಲಾ ಶಿಬಿರಗಳು, ಶಾರದೋತ್ಸವ, ಪ್ರತಿಭಾ ದಿನೋತ್ಸವಗಳನ್ನು ಶಾಲೆಯಲ್ಲಿ ಸಂಘಟಿಸಿ ಅಪೂರ್ವ ಸಾಧನೆ ಮಾಡಿದ್ದಾರೆ. ಕ್ರೀಡಾಸಾಧನೆ ಯಲ್ಲಿ ಶಾಲಾ ಮಕ್ಕಳು ಖೋ ಖೋ ಆಟದಲ್ಲಿ ತಾಲೂಕು, ಜಿಲ್ಲೆ ಮತ್ತು ವಿಭಾಗ ಮಟ್ಟದ ವರೆಗೆ ನಿರಂತರ 3 ವರ್ಷ ಗಳಿಂದ ಸಾಧನೆ, ಆರೋಗ್ಯ ಸಂಘ, ಕ್ರೀಡಾ ಸಂಘ, ಇಕೋ ಕ್ಲಬ್, ವಿಜ್ಞಾನ ಸಂಘ, ತಾಯಂದಿರ ಸಂಘ ಇವೆಲ್ಲವುಗಳ ಮೂಲಕ ಶಿಕ್ಷಣ ಚಟುವಟಿಕೆಗಳನ್ನು ಹಮ್ಮಿಕೊಂಡ ಸರೋಜಿನಿಯವರು ಮೇನಾಲ ಶಾಲೆಯ ಕೀರ್ತಿಯನ್ನು ಬೆಳಗಿಸಿದ್ದಾರೆ.




ವಿಶೇಷ ಅಗತ್ಯವುಳ್ಳ ಮಕ್ಕಳ ಅಭಿವೃದ್ಧಿಗಾಗಿ ವಿಶೇಷ ಕಾಳಜಿವಹಿಸಿದ ಸರೋಜಿನಿಯವರು ವೈಯಕ್ತಿಕವಾಗಿ ಕಾರ್ಯಕ್ರಮಗಳ ಅತ್ಯುತ್ತಮ ಸಂಘಟಕಿ, ಕಾರ್ಯ ನಿರೂಪಕಿ, ಉತ್ತಮ ವಾಗ್ಮಿ, ನಾಟಕ ನೃತ್ಯ ಸಂಗೀತಗಳ ತರಬೇತಿದಾರರಾಗಿ ತೀರ್ಪುಗಾರರಾಗಿ ಮಿಂಚಿದವರು. ಸಾಕ್ಷರತಾ ಆಂದೋಲನ, ವಯಸ್ಕರ ಶಿಕ್ಷಣ, ಸ್ವ-ಸಹಾಯ ಗುಂಪುಗಳ ಚಟುವಟಿಕೆಯಲ್ಲಿ ಪಾತ್ರವಹಿಸಿದರು. ಪರಿಸರವಾದಿಯಾಗಿ ಸಂವಹನಕಾರರಾಗಿ ಪ್ರಸಿದ್ಧಿ ಪಡೆದವರು. ಸಾಹಿತ್ಯ ಸಂಸ್ಕೃತಿಯಲ್ಲಿ ಪ್ರೀತಿಯುಳ್ಳ ಅವರು ಪ್ರಬಂಧ, ಚುಟುಕು, ಕಾವ್ಯ, ವೈಚಾರಿಕ ಲೇಖನ, ಆಶು ಕವನ ಬರೆಯುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಅವರಿಗೆ ಈಗಾಗಲೇ 2002ರಲ್ಲಿ ಜನ ಮೆಚ್ಚಿದ ಶಿಕ್ಷಕ ಪ್ರಶಸ್ತಿ, 2010-11ರಲ್ಲಿ ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ, 2010-11ರಲ್ಲಿ ರಾಜ್ಯ ಮಟ್ಟದ ಡಾ। ರಾಧಾಕೃಷ್ಣನ್ ಅತ್ಯುತ್ತಮ ಎಸ್.ಡಿ.ಎಂ.ಸಿ. ಕಾರ್ಯದರ್ಶಿ ಪ್ರಶಸ್ತಿ, 2011-12ರಲ್ಲಿ ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ 2011-12ರಲ್ಲಿ ಬಾಬು ಜಗಜೀವನ ರಾಮ್ ಫೌಂಡೇಶನ್ ದೆಹಲಿ ಇಲ್ಲಿಂದ ಸಾವಿತ್ರಿ ಬಾಯಿ ಪುಲೇ ನ್ಯಾಶನಲ್ ಫೆಲೋಶಿಪ್ ಎವಾರ್ಡ್ ಬಂದಿದ್ದು, ಇವೆಲ್ಲಕ್ಕೆ ಕಿರೀಟಪ್ರಾಯವಾಗಿ 2012ನೇ ಸಾಲಿನ ಪ್ರತಿಷ್ಠಿತ ಅತ್ಯುತ್ತಮ ಶಿಕ್ಷಕಿ ರಾಷ್ಟ್ರಪ್ರಶಸ್ತಿಯನ್ನು ನವದೆಹಲಿಯಲ್ಲಿ ಅವರು ಪಡೆದುಕೊಂಡಿದ್ದು, ಪುತ್ತೂರು ತಾಲೂಕಿಗೆ ಹೆಮ್ಮೆಯ ವಿಷಯವೇ ಸರಿ.

ಸರಳ ಸಜ್ಜನಿಕೆಯ ಮತ್ತು ನಿಗರ್ವಿ ಹಾಗೂ ವಿನಯ ಸಂಪನ್ನತೆಯ ಶ್ರೀಮತಿ ಸರೋಜಿನಿ ಅವರದು ಸಂತೃಪ್ತ ಸಂಸಾರ. ಅವರ ಪತಿ ವಿ. ನಾಗಪ್ಪಯ್ಯನವರು ಮುಖ್ಯಗುರುಗಳಾಗಿ ನಿವೃತ್ತರಾದವರು. ಮಗ ಪ್ರವೀಣಚಂದ್ರ ಹಾಗೂ ಸೊಸೆ ಪಲ್ಲವಿ ಪ್ರವೀಣಚಂದ್ರ ಪ್ರಕೃತ ಅಮೇರಿಕಾದ ಸಿಯಾಟಲ್‌ನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್‌ಗಳಾಗಿದ್ದು, ಮಗಳು ಚೇತನ ಶಶಿಕಾಂತ್ ಗೃಹಿಣಿಯಾಗಿ, ಅಳಿಯ ಶಶಿಕಾಂತ್ ಎಸ್. ದಿಯಾ ಸಿಸ್ಟಮ್ ಮಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು ಮೊಮ್ಮಕ್ಕಳು ಬೇಬಿ ನಿಯತಿ ರಾವ್, ಸಂಸ್ಕೃತಿ ರಾವ್ ಮತ್ತು ಸಮರ್ಥ್ ಇವರೆಲ್ಲರ ಜೊತೆ ಸರೋಜಿನಿಯವರು ಸಾರ್ಥಕ ಬದುಕು ನಡೆಸುತ್ತಿದ್ದಾರೆ.

## ಪ್ರಥಮ ಅತ್ಯುತ್ತಮ ಲಯನೆಸ್ ಕ್ಲಬ್




ಲಯನ್ಸ್ ಜಿಲ್ಲೆ 317-ಡಿಯ 2012-13ನೇ ಸಾಲಿನ 'ಪ್ರಥಮ ಅತ್ಯುತ್ತಮ ಕ್ಲಬ್' ಪ್ರಶಸ್ತಿಯನ್ನು 'ಲಯನೆಸ್ ಕ್ಲಬ್, ಮಂಗಳೂರು' ಪಡೆದುಕೊಂಡಿದೆ. ಲಯನ್ಸ್ ಗವರ್ನರ್ ಎಂ.ಬಿ. ಸದಾಶಿವ ಮತ್ತು ಗೀತಾ ಆರ್. ಶೆಟ್ಟಿಯವರು ಲಯನೆಸ್ ಅಧ್ಯಕ್ಷೆ ಗಾಯತ್ರಿ ಅರವಿಂದ್ ರಾವ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

## ಪ್ರಥಮ ಅತ್ಯುತ್ತಮ ಲಯನ್ಸ್ ಕ್ಲಬ್




ಲಯನ್ಸ್ ಜಿಲ್ಲೆ 317-ಡಿಯ 2012-13ನೇ ಸಾಲಿನ 'ಪ್ರಥಮ ಅತ್ಯುತ್ತಮ ಕ್ಲಬ್' ಪ್ರಶಸ್ತಿಯನ್ನು 'ಲಯನ್ಸ್ ಕ್ಲಬ್, ಮಂಗಳೂರು' ಪಡೆದುಕೊಂಡಿದೆ. ಲಯನ್ಸ್ ಗವರ್ನರ್ ಎಂ.ಬಿ. ಸದಾಶಿವ ಮತ್ತು ಹರಿಣಿ ಸದಾಶಿವ ಅವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕ್ಲಬ್ಬಿನ ಅಧ್ಯಕ್ಷ ಡಾ. ಕೇದಿಗೆ ಅರವಿಂದ ರಾವ್, ಕಾರ್ಯದರ್ಶಿ ನಾಗರಾಜ ಶರ್ಮ, ಕೋಶಾಧಿಕಾರಿ ಎಚ್. ರಘುವೀರ ರಾವ್ ಅವರಿಗೆ 2012-13ನೇ ಸಾಲಿನ ಅತ್ಯುತ್ತಮ ಜಿಲ್ಲಾ ಅಧ್ಯಕ್ಷ, ಅತ್ಯುತ್ತಮ ಜಿಲ್ಲಾ ಕಾರ್ಯದರ್ಶಿ ಹಾಗೂ ಅತ್ಯುತ್ತಮ ಜಿಲ್ಲಾ ಕೋಶಾಧಿಕಾರಿ ಪ್ರಶಸ್ತಿ ನೀಡಿ ಗೌರವಿಸಿದರು.



## ಜ್ಞಾನಶಕ್ತಿ 'ಪೋಷಕ'ರಾಗಿ ಶ್ರೀಮತಿ ಸಾಂತೂರು ಸರೋಜಿನಿ ದೇವರಾಜ್

ಶ್ರೀಮತಿ ಸಾಂತೂರು ಸರೋಜಿನಿ ದೇವರಾಜ್ ಅವರು ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿರುವ ನಮ್ಮ ಸಮಾಜದ ಓರ್ವ ಅಪೂರ್ವ ಮಹಿಳೆಯಾಗಿದ್ದಾರೆ. ದಿ। ಶ್ರೀ ನಾರಾಯಣ ದೇಲಂಪಾಡಿ ಮತ್ತು ದಿ। ಶ್ರೀಮತಿ ನಾಗವೇಣಿ ದಂಪತಿಯರ ಪುತ್ರಿ. 1942ರಲ್ಲಿ ಜನಿಸಿದರು. ತಮ್ಮ ಹಿರಿಯ ಪ್ರಾಥಮಿಕ ಶಿಕ್ಷಣದ ಬಳಿಕ ಸಾಂತೂರು ದೇವರಾವ ಅವರೊಂದಿಗೆ ವಿವಾಹವಾಗಿ, ಗೃಹಕೃತ್ಯ, ಅತಿಥಿ ಸತ್ಕಾರಗಳಲ್ಲಿ ವಿಶೇಷ ಆಸಕ್ತಿ, ನೈಪುಣ್ಯತೆಗಳನ್ನು ಬೆಳೆಸಿಕೊಂಡರು. ಸದಾ ಹಸನ್ಮುಖಿಯಾಗಿ, ಬಂಧುಮಿತ್ರರಲ್ಲಿ ಸೌಹಾರ್ದ ಸಂಬಂಧ ಮತ್ತು ಊರ, ನೆರೆಹೊರೆಯವರಲ್ಲಿ ಔದಾರ್ಯ, ಸ್ನೇಹಪರತೆ, ಪರೋಪಕಾರ ಇವು ಇವರ ಗುಣ ವಿಶೇಷಗಳು. ಮೂವರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಪಡೆದಿರುವ ಇವರ ಹಿರಿಯ ಪುತ್ರ ಸಾಂತೂರು ಜನಾರ್ದನ ರಾವ್ ಅವರು ಮಾತಾಪಿತರ ಸದ್ಗುಣಗಳನ್ನು ಹೊಂದಿ, ಅವರ ಮಾರ್ಗದರ್ಶನದಂತೆ, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭಿಸಿದ ಉದ್ಯಮ ಮುಂದೆ ನೆರೆಹೊರೆಯ ಜಿಲ್ಲೆಗಳಲ್ಲಿಯೂ ವಿಸ್ತರಿಸಿ ಇದೀಗ ಯಶಸ್ವಿ ಉದ್ಯಮಿ ಎನಿಸಿಕೊಂಡಿದ್ದಾರೆ. ಇವರ ಇನ್ನಿಬ್ಬರು ಸಹೋದರರು ತಾವು ಕೈಗೊಂಡ ಕ್ಷೇತ್ರದಲ್ಲಿ, ಕುಟುಂಬದ ಉನ್ನತ ಧ್ಯೇಯಗಳನ್ನು ಮುಂದುವರಿಸಿ ಕೊಂಡು ಹೋಗುತ್ತಿದ್ದಾರೆ.

ನಮ್ಮ ಪತ್ರಿಕೆಯ 'ಪೋಷಕ'ರಾದ ಇವರಿಗೆ 'ಜ್ಞಾನಶಕ್ತಿ'ಯ ಹೃದಯಪೂರ್ವಕ ನಮನಗಳು

## ಕುತ್ಯಾಳ ನಂದಗೋಕುಲವಾದ ಕ್ಷಣ...

**ಕಾಸರಗೋಡು :** ಶ್ರೀಕೃಷ್ಣ ಜನ್ಮಾಷ್ಟಮಿಯ ಈ ಶುಭದಿನದಂದು ಇಲ್ಲಿ ನೂರಾರು ಚಿಣ್ಣರು ಶ್ರೀ ಕೃಷ್ಣನ ವೇಷದಲ್ಲಿ ಬಂದಿದ್ದಾರೆ. ಕುತ್ಯಾಳ ಇಂದು ನಂದಗೋಕುಲವಾಗಿ ಕಾಣಿಸುತ್ತಿದೆ. ಈ ಬಾಲಕ-ಬಾಲಕಿಯರೆಲ್ಲರೂ ಮುಂದೆ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ತೋರಿಸಿರುವ ಸನ್ಮಾರ್ಗದಲ್ಲೇ ಮುನ್ನಡೆದರೆ ಜೀವನದಲ್ಲಿ ಯಶಸ್ಸು, ಸುಖ ಸಂತೋಷ ತಾನಾಗಿ ಬರುತ್ತದೆ. ಈ ನಿಟ್ಟಿನಲ್ಲಿ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಮಾತೆಯರಲ್ಲೂ ಇದೆ ಎಂದು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಆನುವಂಶಿಕ ಮೊಕ್ತೇಸರ ಶ್ರೀ ಕೆ. ಜಿ. ಶ್ಯಾನುಭೋಗ್ ಹೇಳಿದರು. ಅವರು ಕಾಸರಗೋಡು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವದ ಸಮಾರೋಪ ಸಮಾರಂಭದ ಧಾರ್ಮಿಕ ಸಭೆಯ ಅಧ್ಯಕ್ಷತೆ ವಹಿಸಿ, ಮುದ್ದುಕೃಷ್ಣ ವೇಷ ಸ್ಪರ್ಧಾ ವಿಜೇತರಿಗೆ ಬಹುಮಾನ ನೀಡುತ್ತಾ ಮಾತನಾಡಿದರು. ದೇವಸ್ಥಾನದ ತಂತ್ರಿವರ್ಯ ಉಳಿಯತ್ತಾಯ ವಿಷ್ಣು ಅಸ್ರ ಅವರು ಆಶೀರ್ವಚನಗೈದರು. ಉದ್ಯಮಿ ಶ್ರೀ ಕೆ. ಸುರೇಶ್ ಉಪಸ್ಥಿತರಿದ್ದರು. ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವ ಕಮಿಟಿಯ ಕಾರ್ಯದರ್ಶಿ ಶ್ರೀ ವಿಷ್ಣು ಶ್ಯಾನುಭೋಗ್ ಸ್ವಾಗತಿಸಿದರು.




ವೀಣಾ ಶ್ಯಾನುಭೋಗ್, ರೂಪಾ ನಾಯ್ಕ್ ಪ್ರಾರ್ಥನೆ ಹಾಡಿದರು. ಜಗದೀಶ್ ಕೂಡ್ಲು ವಂದಿಸಿದರು. ಅನಂತರ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ ನಡೆಯಿತು. ಮಧ್ಯರಾತ್ರಿ ಶ್ರೀ ಕೃಷ್ಣನ ಜನನದ ಆಚರಣೆ, ತದನಂತರ ಚಂದ್ರೋದಯಕ್ಕೆ ಸರಿಯಾಗಿ ಶ್ರೀ ಕೃಷ್ಣನನ್ನು ಹಾಲಲ್ಲಿ ಮೀಯಿಸಿ ಶ್ರೀಗಂಧ ಲೇಪಿಸಿ ತುಳಸಿ ಮಾಲೆಯಲ್ಲಿ ಅಲಂಕರಿಸಿ ನಡೆಸಿದ ಪೂಜಾ ಕಾರ್ಯಕ್ರಮಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು. ಮೊಕ್ತೇಸರ ಕೆ. ಜಿ. ಶ್ಯಾನುಭೋಗ್, ಕೃಪಾ ಕೆ. ಜಿ. ಶ್ಯಾನುಭೋಗ್ ದಂಪತಿಗಳು ಶ್ರೀ ಕೃಷ್ಣನಿಗೆ ಅರ್ಘ್ಯಪ್ರಧಾನ ಮಾಡಿದರು.

*ವರದಿ : ಶಮಿತಾ ಕೂಡ್ಲು*

## 'ಸೋಣದೊಂಜಿ ದಿನ'

ತಾ. 15-9-2013ನೇ ಆದಿತ್ಯವಾರ ಬೆಳಗ್ಗೆ ಗಂಟೆ 10-30ರಿಂದ ಪಡುಬಿದ್ರಿಯ ಶ್ರೀ ಬಾಲಗಣಪತಿಪ್ರಸನ್ನ ಪಾರ್ವತಿ ದೇವಸ್ಥಾನದ ವಠಾರದಲ್ಲಿ ಕಾರ್ಯಕ್ರಮ ನಡೆಯಲಿರುವುದು, ನಮ್ಮ ವ್ಯಾಪ್ತಿಯ, ನಮ್ಮ ಸಮಾಜದ 80 ಸಂವತ್ಸರಗಳನ್ನು ದಾಟಿದ ಹಿರಿಯ ಮಾತೆಯರನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮ ನಡೆಯಲಿರುವುದು. ಹಾಗೂ ಮಹಿಳಾ ವೇದಿಕೆಯ ಸದಸ್ಯೆಯರಿಂದ ತಯಾರಿಸಲ್ಪಟ್ಟ ರುಚಿಕರವಾದ ತಿಂಡಿ-ತಿನಿಸುಗಳನ್ನು ಒಳಗೊಂಡ ಭೋಜನ ಕೂಟದಲ್ಲಿ ನಮ್ಮ ಸಮಾಜ-ಬಾಂಧವರಾದ ತಾವೆಲ್ಲರೂ ಭಾಗವಹಿಸಿ, ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತಿದ್ದೇವೆ.

*ಅಧ್ಯಕ್ಷರು ಹಾಗೂ ಸರ್ವಸದಸ್ಯರು, ಮಹಿಳಾ ವೇದಿಕೆ*
*ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ*



# ಲಂಡನ್ ಪ್ರವಾಸ

* ಶ್ರೀಮತಿ ಸುಶೀಲಮ್ಮ ಕೂಳೂರು

ಜೂನ್ 6ನೇ ತಾರೀಕು ಗುರುವಾರ ಬೆಂಗಳೂರಲ್ಲಿರುವ ಮಗ ಕೃಷ್ಣಪ್ರಸಾದನ ಜೊತೆ ಏರ್‌ಪೋರ್ಟ್‌ಗೆ ರಾತ್ರಿ ಎರಡೂವರೆ ಗಂಟೆಗೆ ಬಂದು ನನ್ನ ತಮ್ಮನ ಮಗ ಪೈಲಟ್ ಸುದರ್ಶನನ ಫ್ರೆಂಡ್ ಮೂಲಕ ಇಂಡಿಯಾ ಟೈಮ್ ಪ್ರಕಾರ ಬ್ರಿಟೀಷ್ ಏರ್‌ವೇಸ್ ಸರ್ವಿಸ್‌ಗೆ ಹತ್ತಿ ಮರುದಿನ ಲಂಡನಿಗೆ ಹನ್ನೆರಡೂವರೆ ಗಂಟೆಗೆ ಬಹಳ ಸಲೀಸಾಗಿ ವಿಮಾನದಿಂದ ಹೊರಗೆ ಬಂದೆ.

ಫಿಲಿಫೈನ್‌ನಲ್ಲಿದ್ದ ನನ್ನ ಮಗ ಅರವಿಂದನ ಮತ್ತು ಏರ್‌ಪೋರ್ಟಿನ ಹೊರಗೆ ಕಾಯುತ್ತಿದ್ದ ನನ್ನ ಸೊಸೆ ಅಶ್ವಿನಿಯು ಫೋನುಗಳು ಬರಲಾರಂಭಿಸಿದವು. ನನ್ನ ಫೋನಿನಲ್ಲಿ ರೋಮಿಂಗ್ ಪೆಸಿಲಿಟಿ ಇದ್ದದ್ದರಿಂದ ಅವರ ಫೋನುಗಳು ಬಂದರೂ ನನ್ನ ಫೋನಿನ ಹಣ ಹೋಗುತ್ತಿದ್ದದ್ದು ನನ್ನ ಅರಿವಿಗೆ ಬರಲೇ ಇಲ್ಲ. ಜೊತೆಯಲ್ಲಿಯೆ ಅವರ ಫೋನುಗಳು ಬರುವುದು ನಿಂತಿತು.

ಆದರೆ ಹೆಚ್ಚಿನ ವಿದ್ಯಾಭ್ಯಾಸವಿಲ್ಲದ ನನಗೆ, ಲಂಡನಿಗೆ ಹೋಗುವ ಕನ್ನಡಿಗರು ಇಲ್ಲದಿದ್ದ ರಿಂದ ಬಹಳ ಗಾಬರಿಯಾಗಿದೆ. ಇದಕ್ಕೆ ನಮ್ಮ ಮಕ್ಕಳು 70ರ ವಯಸ್ಸಿನ ನಿರ್ಬಲೆಯಾದ ನನಗೆ, ವ್ಹೀಲ್‌ಚಯರ್ ಸಹಾಯ ತೆಗೆದು ಕೊಂಡಿದ್ದರೂ ಕೂಡಾ, ನಾನು ತೆಳ್ಳಗಾಗಿ ಸಣ್ಣಗೆ ಕಂಡಿದ್ದರಿಂದಲೋ ಏನೋ, ಅತಿ ಮುದುಕಿಯರಿಗೆ ಮುದುಕರಿಗೆ ವ್ಹೀಲ್ ಚಯರ್ ಕೊಟ್ಟು ನನಗೆ ಕೊಡಲೇ ಇಲ್ಲ, ಮೈಲಿಗಟ್ಟಲೆ ವಿಸ್ತೀರ್ಣವಿರುವ ಲಂಡನ್ ಏರ್‌ಪೋರ್ಟಿನ ಒಳಗೆ ಒಂದು ಕಡೆಯಿಂದ ಒಂದು ಕಡೆಗೆ ಟ್ರೈನಿನಲ್ಲಿ ಹೋಗಬೇಕಾದ ಸಂದರ್ಭ, ನನ್ನ ಭಾಷೆ ಯಾರಿಗೂ ತಿಳಿಯ ದ್ರಿಂದ ಆ ನಡುಗುವ ಚಳಿಯಲ್ಲೂ ಒಮ್ಮೆ ಬೆವತುಹೋಗಿದ್ದೆ. ಆಗ ನನ್ನ ಮನೋಸ್ಥೈರ್ಯ ವನ್ನು ಗಟ್ಟಿಮಾಡಿಕೊಂಡು ನಾನು ನಂಬಿಕೊಂಡು ಬಂದಂತಹ ದೇವತೆಯರನ್ನೂ, ಗುರೂಜಿ ಹಾಗೂ ನನ್ನ ಇಷ್ಟದೇವರಾದ ರಾಯರನ್ನೂ ಒಂದು ನಿಮಿಷ ನಿಂತು ನನ್ನನ್ನು ಈ ಕ್ಷಣದಲ್ಲಿಯೂ ಪರೀಕ್ಷಿಸು ತ್ತೀಯಾ, ನನಗೆ ದಾರಿ ತೋರಿಸಪ್ಪಾ ಎಂದು ದೀನಳಾಗಿ ಪ್ರಾರ್ಥಿಸಿಕೊಂಡೆ.

ಅನಂತರ ಅವರವರ ವಿಮಾನದ ಟೈಮಿಗೆ ಓಡುವವರತ್ರ ನನಗೆ ಹೆಲ್ಪ್ ಕೊಡಿ, ನನ್ನ ಬ್ಯಾಗ್‌ಗಳು ಇಮಿಗ್ರೇಷನ್ ಚಕ್ಕ್ ಯಾವ ನಂಬರಲ್ಲಿ ಬರ್ತಾ ಇದೆ? ಎಂದು ಕೇಳಿ ಕೊಂಡಾಗ ಕೆಲವರು ಕೌಂಟರಿಗೆ ಹೋಗಿ, ಲ್ಯಾಂಡಿಂಗ್ ಕಾರ್ಡ್ ಕೇಳಿದಾಗ 5ನೇ ನಂಬ್ರದಲ್ಲಿ ಬರ್ತಾ ಇದೆ ಎಂದು ತಿಳಿಯಿತು. ಎಷ್ಟೋ ದೂರ ಮುಂದೆ ಹೋದವಳು ಹಿಂದೆ ಓಡಿ ಬಂದು 5ನೇ ನಂಬ್ರದಲ್ಲಿ ಬರುವಂತಹ ಬೇಗುಗಳನ್ನು ಹಿಂದಿ ಗೊತ್ತಿದ್ದ ಒಬ್ಬ ಹುಡುಗಿಯ ಮೂಲಕ ಪಡಕೊಂಡೆ. ನಂತರ ಹೊರಗೆ ಹೋಗುವ ದಾರಿ ನಮ್ಮಿಬ್ಬರಿಗೂ ಗೊತ್ತಿಲ್ಲದ್ರಿಂದ ಕಂಡವರ ಬಳಿ ಎಲ್ಲ ಕೇಳಿಕೊಂಡು ಅಂತೂ ಏರ್‌ಪೋರ್ಟಿನ ಹಿಂಭಾಗದಿಂದ ಬಂದುಬಿಟ್ಟೆವು. ಅಲ್ಲಿ ಏರ್‌ಪೋರ್ಟಿನ ಹೊರಗೆ ಕಾಯುತ್ತಿದ್ದ ನನ್ನ ಸೊಸೆಗೆ ಆ ಹುಡುಗಿಯತ್ರ ಫೋನ್‌ನಲ್ಲಿ ಮಾತಾಡಿ ನನ್ನನ್ನೂ ಅವಳನ್ನು ಮೀಟ್ ಮಾಡಿಸಿದಳು. ಅಲ್ಲಿಗೆ ಅಶ್ವಿನಿಗೂ ಫಿಲಿಫೈನ್ ನಲ್ಲಿದ್ದ ನನ್ನ ಮಗನಿಗೂ, ನನಗೂ ನಿಶ್ಚಿಂತೆ ಯಾಯಿತೆನ್ನಬಹುದು.

ಅನಂತರ ಲಂಡನ್ನಿನ ಮೇಡಂಹೆಡ್ಡ್ ನಲ್ಲಿದ್ದುಕೊಂಡು ಅತಿ ಮುಖ್ಯ ಭಾಗಗಳನ್ನು ನೋಡಿದೆವು. ಸ್ಲೌನಲ್ಲಿರುವ ಗುಜರಾತಿ ಹಿಂದೂ ಟೆಂಪಲ್, ವೆಂಕಟ್ರಮಣ ಟೆಂಪಲ್, ನ್ಯೂಬರಿಯಲ್ಲಿ ಕಯಾಕ್ ಬೋಟಿಂಗ್ ಮಾಡಿದೆವು. ಆ ಕ್ಷೆಲ್ ಪಾರ್ಕ್, ವರ್ಜೀನಿಯಾ ವಾಟರ್ಸ್ ಬ್ರೇವಿಕ್ ನೇಚರ್ ಪಾರ್ಕ್, ಲಂಡನ್ ಐ, ಲಂಡನ್ ಬ್ರಿಡ್ಜು, ಟವರಾಸ್ ಲಂಡನ್ ಬಕ್ಕಿಂಗ್‌ಹೇಮ್ ಪ್ಯಾಲೇಸ್, ಲಂಡನ್ ಐ, ಐ ಮೇಕ್ಸ್ ಮೂವಿ. ಅತಿ ಎತ್ತರದ ತ್ರಿಕೋನ ಷೇಪಿನ ಷಾರ್ಡ್ ಬಿಲ್ಡಿಂಗ್, ರೇಮಿಲ್ ಐಲೇಂಡ್, ಡ್ವಾರ್ನಿಲೇಕ್, ಬ್ಮೆಬರಿ ಹಳ್ಳಿ, ಬಾರ್‌ಟನ್ ಹಳ್ಳಿ, ಚಿಲ್‌ಟನ್ ಹಾಮ್. ಪ್ರಸಿದ್ಧವಾದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಜಗತ್ತಿನಲ್ಲಿಯೆ ನಂಬರ್ ಒನ್ ವಿಜ್ಞಾನಿಗಳೆಲ್ಲ ಓದಿದ ಜಾಗ, ಸುಮಾರು 400 ವರ್ಷದ ಹಿಂದಿನಿಂದ ಈ ವಿಶ್ವವಿದ್ಯಾಲಯದಲ್ಲಿ ಪ್ರಪಂಚದ ಫೇಮಸ್ ವಿಜ್ಞಾನಿಗಳು, ಕಲಾಕಾರರು, ಚಿಂತಕರೂ, ಓದಿರುವಂಥ ಪ್ಲೇಸ್ ಇದು. 16–17 ಕಾಲೇಜುಗಳಲ್ಲಿ ಕ್ರೈಸ್ತ ಕಾಲೇಜು ಮುಖ್ಯವಾಗಿದೆ. ಅವರ ಸಭಾಂಗಣ ಚರ್ಚ್, ಡಿನ್ನರ್ ಹಾಲ್‌ಗಳು, ಲಿಂಕನ್ ಕಾಲೇಜು, ಚರ್ಚ್ ಒಲೆಮ್ಮಿಯಾ, ಥಿಯೇಟರ್, ನಂತರ ರಾಣಿಯ ವಿಂಡ್ಸರ್, ಅರಮನೆ, ವಿಂಡರ್ ಪಾರ್ಕ್ ಥೇಮ್ಸ್ ನದಿಯಲ್ಲಿ ಬೋಟಿಂಗ್ ಮಾಡಿ ಖುಷಿಪಟ್ಟೆವು. ಅನಂತರ ಸ್ವಾನ್‌ಸಿ ಸಿಟಿಯಲ್ಲಿರುವಂತಹ ಬ್ಯಾರೀಸ್ ಐಲೆಂಡ್ ಬೀಚ್‌ಗೆ ಹೋಗಿದ್ದೆವು. ಬಹಳ ದೊಡ್ಡದಾದ ಬೀಚ್. ಅಲ್ಲಿರುವ ಬೀಚಿಗೆ ಸಮೀಪದಲ್ಲಿ ಬಹಳ ದೊಡ್ಡ ಪಾರ್ಕ್ ಸಮುದ್ರ ಕಾಯುವ ಕಳ್ಳರ ಕತೆಯನ್ನೇ ಹೇಳುತ್ತದೆ.

ಅದೇ ರಾಜ್ಯದಲ್ಲಿರುವ ಎಲ್ಲರು ಮೆಚ್ಚು ವಂಥ ಸ್ಕಂದವೇಲ್ ಟೆಂಪಲಿಗೆ ಹೋಗಿದ್ದೆವು. ಶ್ರೀಲಂಕದ ಶ್ರೀಗುರು ಸುಬ್ರಹ್ಮಣ್ಯಂ ಅನ್ನುವ ಸ್ವಾಮಿ 1973ರಲ್ಲಿ ವೇಲ್ಸ್‌ನಲ್ಲಿ ಈ ಟೆಂಪಲನ್ನು ಕಟ್ಟಿದರು. ಶ್ರೀಲಂಕದಿಂದ ಲಂಡನಿಗೆ ಬಂದು ಹಲವಾರು ವರ್ಷಗಳಿದ್ದು. ಲಂಡನಿನ ಪ್ರತಿಯೊಂದು ಸಾಮಗ್ರಿಗೂ ಖಂಡಾಬಟ್ಟೆ ಬೆಲೆಯನ್ನು ಕಂಡು, ವೇಲ್ಸ್‌ಗೆ ಬಂದು ಬಹಳ ದೊಡ್ಡ ಕಾಡಿನ ಮಧ್ಯೆ ಕ್ರಿಶ್ಚಿಯನ್ ಮತ್ತು ಬ್ರಿಟೀಷರನ್ನು ಸೇರಿಸಿಕೊಂಡು ಸುಬ್ರಹ್ಮಣ್ಯ ಸ್ವಾಮಿಯ ದೇವಸ್ಥಾನವನ್ನು ಕಟ್ಟಿದರು. ಅಲ್ಲಿ ಏಸು, ಶಿವ, ದೇವ, ದೇವಿಯರ ವಿಗ್ರಹಗಳು ಸರೋವರದ ಮಧ್ಯೆ ಇರುವ ಲಕ್ಷ್ಮೀದೇವಿ, ರಂಗನಾಥ ಸ್ವಾಮಿ ಅನಂತಶಯನನಾಗಿ, ಇಲ್ಲಿ ಎಲ್ಲ ದೇವತೆಗಳಿಗೂ, ಆಗಾಗ ಸಮಯಕ್ಕೆ ಸರಿಯಾಗಿ ನೈವೇದ್ಯ ಆರತಿಗಳು, ಬ್ರಿಟೀಷರೂ, ಕ್ರಿಶ್ಚಿಯನ್ನರೂ, ಸೇರಿ ಬಹಳ ಭಕ್ತಿಭಾವದಿಂದ ಇಂಡಿಯಾದಲ್ಲಿ ಹೇಳುವ ಮಂತ್ರಗಳನ್ನು ಎಲ್ಲರೊಂದಾಗಿ, ಹೇಳು ವುದನ್ನು ನೋಡುವಾಗ ಭಕ್ತಿ ಇಲ್ಲದವರಿಗೆ ಭಕ್ತಿ ಬರುತ್ತದೆ.

ನಾನಂತೂ ಪೂಜಾ ಸಮಯದಲ್ಲಿ ಧ್ಯಾನ ಮಾಡುತ್ತಿರುವಾಗ ಕಾಡಿನ ಮಧ್ಯೆ ಇರುವಂಥ ವನಸಿರಿಯಿಂದಲೋ, ಹೂಗಳ ಸುವಾಸನೆಯಿಂದಲೋ ದೇವರ ಶಕ್ತಿಯ ಪ್ರಭಾವದಿಂದಲೋ, ಬರುವ ವೈಬ್ರೇಷನ್ನಲ್ಲಿ ದೇವರ ಪೂಜೆ ನೋಡಬೇಕೆನಿಸಿದರೂ ಆಗದೆ ಕಣ್ಣು ಮುಚ್ಚಿ ಮುಚ್ಚಿ ಬರುತ್ತ ಒಂದು ಧ್ಯಾನದ ಮೇಲ್ಮಟ್ಟದ ಆನಂದ ಸ್ಥಿತಿಯನ್ನು ಅನುಭವಿಸಿದ್ದೇನೆ. ಅನಂತರ ಒಂದೂವರೆ ಕಿಲೋ ಮೀಟರ್ ಎತ್ತರದ ಗುಡ್ಡದ ತುದಿ ಯಲ್ಲಿ ನಾಲಗೆ ಚಾಚಿ ನಿಂತ ಕಾಳಿಕಾಂಬಾ ಗುಡಿಯಲ್ಲಿ ಬೆಳಗ್ಗೆ 6–00 ಗಂಟೆಗೆ ಸಂಜೆ 6–00 ಗಂಟೆಗೆ ಪೂಜೆ ನಡೆಯುತ್ತದೆ.

ಅದಕ್ಕೆ ತಾಗಿಯೇ ಈಶ್ವರನ ವಿಗ್ರಹವು ಸ್ವಾಮಿ ಸುಬ್ರಹ್ಮಣ್ಯಂ ಅವರ ವಿಗ್ರಹವು, ಇದೆ. ಅತಿ ದೊಡ್ಡ ಆನೆಯು ಇದೆ. ಬ್ರಿಟೀಷರೆ ಪೂಜೆ ಮಾಡುವವರೆ, ಆನೆ ಸ್ನಾನ ಮಾಡಿಸುವುದು, ಲ್ಯಾಟ್ರಿನ್ ಬಾತ್ ರೂಂ ತೊಳೆಯುವುದು, ಸ್ವಯಂಸೇವಕರಾಗಿ ಅಡಿಗೆ ಮಾಡುವುದರಲ್ಲಿ ಸಂತೋಷಪಡುತ್ತಾರೆ.

ಯಾವುದೇ ಕಾಣಿಕೆ ಡಬ್ಬಗಳನ್ನಿಡದೆ ಪ್ರೀತಿಯಿಂದ ಕೊಟ್ಟ ಡೊನೇಷನ್ ತಗೊಂಡು ಅನ್ನದಾನವು ನಡೆಯುತ್ತದೆ. ದೇಣಿಗೆಯಾಗಿ ಬಂದ ಅಕ್ಕಿ ಸಾಮಾನುಗಳನ್ನೆಲ್ಲ ಪೂಜಾ ಸಮಯದಲ್ಲಿ ದೇವರೆದುರಿಗಿಡುತ್ತಾ ದೇವರಿ ಗಾದ ಆರತಿಯನ್ನು ಆ ದೊಡ್ಡ ಮೂಟೆಗಳಿಗೂ ಆರತಿ ಎತ್ತುತ್ತಾರೆ.

ಇಲ್ಲಿ ಮರದಿಂದಲೇ ಕಟ್ಟಿದ ವೇದ ಪಾಠಶಾಲೆಯಲ್ಲಿ ಎಲ್ಲ ವರ್ಗದವರೂ ಪಾಠ ಕಲಿಯುತ್ತಾರೆ. ಈಗಿನ ಕಾಲದ ಆಧುನಿಕ ಕಟ್ಟಡಗಳ ಹಾಗೆ ಇಲ್ಲದಿದ್ದರೂ, ದೇವರ ಗರ್ಭಗುಡಿ, ನೆಲಗಳು ಕೂಡಾ ಮರದಿಂದಲೆ ಬಹಳ ಚಂದವಾಗಿ ಕಟ್ಟಿದ ಕಲೆಯನ್ನು ನೋಡಿದರೆ, ಎಂಥವರೂ ಮೆಚ್ಚಬೇಕಾದ್ದೆ. ಅಹಿಂಸೆ ಮಾಡುವವರನ್ನು ಮಾತ್ರ ಇಲ್ಲಿ ಸೇರಿಸಿಕೊಳ್ಳದೆ ಭಗವಂತನಿಗೆ ನಾವೆಲ್ಲರೂ ಒಂದೆ ಎನ್ನುತ್ತಾ ಮೊಬೈಲ್ ಕ್ಯಾಮರಾ ದೂರವಿರಿಸಿ ಕೆಲವೇ ಕೆಲವು ಗಂಟೆಗಳ ಕಾಲ ವಾದರೂ ನಿಮ್ಮನ್ನು ನೀವು ಭಗವಂತನಿಗೆ ಸಮರ್ಪಿಸಿಕೊಂಡು ಅವನಲ್ಲಿ ಒಂದಾಗಲು ಪ್ರಯತ್ನಿಸಿ ಎನ್ನುತ್ತಾರೆ.

ಮೇಡಂ ಹೆಡ್ಡ್‌ನಲ್ಲಿರುವ ನಮ್ಮ ಮನೆ ಯಿಂದ ಕಾರಿನಲ್ಲಿ 6–00 ಗಂಟೆಗಳ ಕಾಲ ಬಹಳ ಬಿಸಿಯಲ್ಲಿರುವ ಮಗ ಸೊಸೆ 2 ದಿನ ರಜಮಾಡಿ, ಸ್ವಾನ್ಸ್ ರಾಜ್ಯಕ್ಕೆ ಕರಕೊಂಡು ಹೋಗಿ ನನ್ನನ್ನು ಪುನೀತರಾಗಿಸಿದ್ದಾರೆ. ಇಲ್ಲಿಯ ಭಕ್ತಿಭಾವದಿಂದ ಕೊಡುವ ಆರತಿ ಪ್ರಸಾದಗಳು, ಪ್ರೀತಿಯಿಂದ ಮಾಡುವ ಸೇವೆ ಎಂಥವರನ್ನೂ ಮರುಳಾಗಿಸುತ್ತದೆ. ನನ್ನ ಮಕ್ಕಳ ಮೂಲಕ ಇಂಥ ಆನಂದದ ಸ್ಥಿತಿಯನ್ನು ತಲುಪಬೇಕಿದ್ರೆ ಶಕ್ತಿ ದರ್ಶನ ಯೋಗಾಶ್ರಮದ ನಮ್ಮ ಸದ್ಗುರುಗಳ ಕೃಪಾಶೀರ್ವಾದದಿಂದ ಎಂಬು ವುದರಲ್ಲಿ ಸಂಶಯವಿಲ್ಲ. ಧ್ಯಾನದಲ್ಲಿರುವ ಅವರು ಶಿಷ್ಯರನ್ನೆಂದಿಗೂ ಕೈಬಿಡುವುದಿಲ್ಲ.

## ಶ್ರೀ ಸಭಾದಲ್ಲಿ ನಡೆದ ಶ್ರೀಕೃಷ್ಣಾಷ್ಟಮಿ ಸ್ಪರ್ಧಾ ವಿಜೇತರು



**ಭಗವದ್ಗೀತೆ ಸ್ಪರ್ಧೆ (1ರಿಂದ 10 ವರ್ಷದೊಳಗಿನ ವಿಭಾಗ)**
ಪ್ರಥಮ : ಸಮನ್ವಿತಾ ದ್ವಿತೀಯ : ತನುಶ್ರೀ ತೃತೀಯ : ಸ್ಮಿತಾ, ಶೃತಿ
**10ರಿಂದ 16 ವರ್ಷದೊಳಗಿನ ವಿಭಾಗ**
ಪ್ರಥಮ : ವೈಭವ ಲಕ್ಷ್ಮೀ ದ್ವಿತೀಯ : ಪಲ್ಲವಿ
**16 ವರ್ಷದ ಮೇಲ್ಪಟ್ಟವರ ವಿಭಾಗ**
ಪ್ರಥಮ : ಸೌಂದರ್ಯಲಕ್ಷ್ಮೀ ದ್ವಿತೀಯ : ಐಶ್ವರ್ಯಲಕ್ಷ್ಮೀ
ತೃತೀಯ : ಪುಷ್ಪಾವತಿ ಎಸ್. ರಾವ್
**ಮುದ್ದು ಕೃಷ್ಣ ವೇಶ ಸ್ಪರ್ಧೆ (1ರಿಂದ 4 ವರ್ಷದೊಳಗಿನ ವಿಭಾಗ)**
ಪ್ರಥಮ : ಯಶಿಕಾ, ಅಂಕಿತ, ಶರಣ್ಯ ದ್ವಿತೀಯ : ಪ್ರತೀಕ್ ತೃತೀಯ : ಶ್ರೇಷ್ಠ
**4ರಿಂದ 8 ವರ್ಷದೊಳಗಿನ ವಿಭಾಗ**
ಪ್ರಥಮ : ಮನಸ್ವಿನಿ ದ್ವಿತೀಯ : ಮನೋಮಯ ತೃತೀಯ : ಗೌರವ್
**ಮಡಕೆ ಒಡೆಯುವ ಸ್ಪರ್ಧೆ (16 ವರ್ಷದೊಳಗಿನ ವಿಭಾಗ)** : ಸಮನ್ವಿತ
**16 ವರ್ಷ ಮೇಲ್ಪಟ್ಟವರ ವಿಭಾಗ** : ಅವಿನಾಶ್
**ಚಕ್ಕುಲಿ ಊಹನೆ ಸ್ಪರ್ಧೆ** : ಶ್ರೀಮತಿ ಸುಚಿತ್ರಾ ರಾವ್
**ಭಕ್ತಿಗೀತೆ ಸ್ಪರ್ಧೆ (16ರಿಂದ 35 ವರ್ಷ)**
ಪ್ರಥಮ : ಮೇಘನ ರಾವ್ ದ್ವಿತೀಯ : ಸೌಂದರ್ಯಲಕ್ಷ್ಮೀ
**35ರಿಂದ ಮೇಲ್ಪಟ್ಟವರು :** ಪ್ರಥಮ : ರಾಘವೇಂದ್ರ ರಾವ್ ದ್ವಿತೀಯ : ರಾಜೇಂದ್ರ
ತೃತೀಯ : ಹರಿನಾರಾಯಣ ರಾವ್


*Manish Rao U.*

Tel : (O) 2223301
Mobile : 9448726499 / 8884284939

**NAVA COMPUTER**



***Dealers in : Computers Hardware and Peripherals***
***Computer Sales & Services***

***Alvares Centre, N.H. 17, Nanthoor, Mangalore - 575 005***



**PRAVEEN KUMAR ADYAPADY**
**ADVOCATE**

**MANGALORE OFFICE**
JANVI PLAZA; IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX: IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584,9448724981(M), 2254448 (R)

**We undertakes:** Civil, Criminal, Motor Vehicles, A.C., D.C. Cases, Land Conversion, Registration etc.

## ಚುಟುಕು

ಹಸಿರಿಲ್ಲದ ಉಸಿರಿಲ್ಲ
ಕೆಸರಿಲ್ಲದ ಕೆರೆಯಿಲ್ಲ
ಬಸಿರಿಲ್ಲದ ಮಗುವಿಲ್ಲ
ಮೊಸರಿಲ್ಲದ ಊಟ ಸಮನಲ್ಲ

ಪ್ರಕೃತಿಯ ರುದ್ರ ನರ್ತನ
ಮಾನವನ ದುಷ್ಕೃತ್ಯವೇ ಮೂಲಕಾರಣ
ಮಾನವ ಕೋಟಿಗೆ ಕಂಪನ
ಕಾಪಾಡು ಶಿವನೇ ನಮೋ ನಮಃ

ಶಕ್ತಿಗಿಂತ ಯುಕ್ತಿ ಮೇಲು
ಯುಕ್ತಿಗಿಂತ ಮುಕ್ತಿ ಮೇಲು
ಮುಕ್ತಿಗೆ ಭಕ್ತಿಯೇ ಮೂಲ
ಭಕ್ತಿಗೆ ಇರಬೇಕು ಶುದ್ಧ ಶೀಲ

*ವತ್ಸಲಾ ಯೋಗೀಶ್ ರಾವ್ ಏಳಿಂಜೆ*

## ಕವನಗಳು

### ಒಡನಾಟ

ಜಾಣರೊಡನಾಟ ಕಲಿ
ನಿನ್ನ ವಿದ್ಯೆಬುದ್ಧಿಯ ಬೆಳೆಸು
ಒಟ್ಟಿನಲಿ ಸವಿಯಾಗಲಿ
ಬೆಲೆಯುಳ್ಳಾ ನಿನ್ನ ಬಾಳು

### ರಾಜಕೀಯ ಪ್ರಹಾರಿ

ಇಂದು ನಿನ್ನೆಯದಂತಲ್ಲ ರಾಜಕೀಯ
ಈತನ ರಾಜಕೀಯತೆ ತಂತ್ರ
ಯಾರಿಗೂ ತಿಳಿಯದಂತೆ ನಡೆಯುವ
ಇವೆಲ್ಲವೂ ಸ್ವತಂತ್ರ, ಭ್ರಷ್ಟ
ಕೈಗೆ ಸಿಕ್ಕಷ್ಟನ್ನು ಬಾಚಿ
ತಿನ್ನುವ ದೇಶದ ಛತ್ರ

*ಪಿ. ಮೋಹನದಾಸ್ ರಾವ್*


ಬಳ್ಪ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಮತ್ತು
ಬಳ್ಪ ಶ್ರೀ ತ್ರಿಶೂಲಿನೀ ದೇವಸ್ಥಾನ
**ಅಂಚೆ : ಬಳ್ಪ, ಸುಳ್ಯ ತಾಲೂಕು, ದ. ಕ., 574 232**

ಆತ್ಮೀಯ ಭಗವದ್ಭಕ್ತರೇ,

ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಾಧೀಶ್ವರರಾದ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಪರಮಾನುಗ್ರಹದಿಂದ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಮತ್ತು ಶ್ರೀ ತ್ರಿಶೂಲಿನೀ ದೇವಸ್ಥಾನದಲ್ಲಿ ದಿನಾಂಕ 5-10-2013ನೇ ಶನಿವಾರದಿಂದ ದಿನಾಂಕ 13-10-2013ನೇ ರವಿವಾರದ ವರೆಗೆ **ಮಹಾನವರಾತ್ರಿ ಉತ್ಸವಗಳು** ಜರಗಲಿರುವುದು.

ಆ ಪ್ರಯುಕ್ತ ತಾವೆಲ್ಲರೂ ಬಂದು ಈ ಸತ್ಕಾರ್ಯಗಳಲ್ಲಿ ಭಾಗವಹಿಸಿ ತನು-ಮನ-ಧನಗಳಿಂದ ಸಹಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ –

**ಆಡಳಿತ ಮಂಡಳಿ, ಅರ್ಚಕರು ಹಾಗೂ ಊರ ಹತ್ತು ಸಮಸ್ತರು**



ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್**
ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಸುರತ್ಕಲ್, ಮಂಗಳೂರು**



**ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ**

ಶ್ರೀ ದೇವಳದ ಸಂಪೂರ್ಣ ಶಿಲಾಮಯ ಗರ್ಭಗುಡಿಗೆ ದಿನಾಂಕ 15-9-2013ನೇ ಬುಧವಾರ ಬೆಳಗ್ಗೆ ಗಂಟೆ 8-20ರ ಕನ್ಯಾಲಗ್ನದಲ್ಲಿ *ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರ ಪರಮಾನುಗ್ರಹದೊಂದಿಗೆ*

**'ಶಿಲಾನ್ಯಾಸ'**

ಬ್ರಹ್ಮಶ್ರೀ ವೇದಮೂರ್ತಿ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನಡೆಯಲಿದೆ. ಅನಂತರ ಭಕ್ತಾದಿಗಳಿಂದ ಕರಸೇವೆ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಪ್ರಿಯ ಭಗವದ್ಭಕ್ತರೇ,

**ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ**

**'ನವರಾತ್ರಿ ಉತ್ಸವ ಹಾಗೂ ಶ್ರೀ ಚಂಡಿಕಾಹೋಮ'**

ಇದೇ ಬರುವ ದಿನಾಂಕ 5-10-2013ರಿಂದ 14-10-2013ರ ತನಕ ನಡೆಯಲಿರುವುದರಿಂದ, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀದೇವಿಯ ಸನ್ನಿಧಿಗೆ ಆಗಮಿಸಿ ತೀರ್ಥಪ್ರಸಾದವನ್ನು ಸ್ವೀಕರಿಸಿ, ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ–

**ಯಂ. ನಾಗೇಶ ಶರ್ಮ** – ಅರ್ಚಕರು : 9901247080
**ಟಿ. ಅಣ್ಣಪ್ಪಯ್ಯ ತೆಂಕಿಲ** – ಅಧ್ಯಕ್ಷರು



*Prop. : P. Srikanth Rao* Mobile : 9343361618

**M/s. SAMARPAN**

*HOUSE OF STATIONERY*



**Near Vijaya Pen Mart**
**Hampankatta, Mangalore - 1**



ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ಧ್ರುವ್**




**Sharekhan**
Your guide to the financial jungle

EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT

**Pradeep Rao K.**
NAVADURGA FINANCIALS
Ph: 0824-2412905, 2441318 Mobile: 94481 91028





**ರಮ್ಯಶ್ರೀ,** *5ನೇ ತರಗತಿ*
*ಸೈಂಟ್ ಏನ್ಸ್ ಸ್ಕೂಲ್, ಕಡಬ*




**ಸ್ಮಿತಾ ಸಿ.,** *4ನೇ ತರಗತಿ*
*ಸರಕಾರಿ ಹಿ. ಪ್ರಾ. ಶಾಲೆ*
*ಚೆತ್ತಾಪುರ – ಕುಳಾಯಿ*

**ಸೂಚನೆ : ದಯವಿಟ್ಟು ರೇಖಾಚಿತ್ರಗಳನ್ನು ಕಪ್ಪು ಬಾಲ್‌ಪೆನ್ ಯಾ ಇಂಕ್‌ಪೆನ್‌ನಲ್ಲೇ ರಚಿಸಿ ಕಳುಹಿಸಿ.**

# ಚಿಣ್ಣರ ಆರ್ಟ್ ಗ್ಯಾಲರಿ




ಚಿತ್ರ 1




ಚಿತ್ರ 2

ಈ ಮೇಲಿನ ಎರಡು ಚಿತ್ರಗಳಲ್ಲಿರುವ 10 ವ್ಯತ್ಯಾಸಗಳನ್ನು ಗುರುತಿಸಿ.



*ಅನಘಾ ರಾವ್*
*4ನೇ ತರಗತಿ*



**Birth of Bird**

*ಅನನ್ಯ ರಾವ್*
*1ನೇ ತರಗತಿ*

ಜ್ಞಾನಶಕ್ತಿ **'ಚಿಣ್ಣರ ಆರ್ಟ್ ಗ್ಯಾಲರಿ'**ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ.

**ನಮ್ಮ ವಿಳಾಸ :**
**ಅಂಚೆ ಪೆಟ್ಟಿಗೆ ನಂ. 206, ದರ್ಬೆ - 574 202, ಪುತ್ತೂರು, ದ. ಕ.**

# ಪ್ರೀತಿಯ ಸಂಜೀವ ಮಾಮನಿಗೆ ಸ್ನೇಹಲತೆಯ ಶ್ರದ್ಧಾಂಜಲಿ

***(ಕವನ ರೂಪದಲಿ)***

ಪ್ರೀತಿಯ ಮಾಮ,

ನೀವು ನನ್ನ ತಮ್ಮ ಬೆಳ್ಳೆ ರಾಮಮೋಹನನಿಗೆ ನಿಮ್ಮ ಮಗಳು
'ವೀಣ'ಳನ್ನು ಕೊಟ್ಟು ಬೆಳ್ಳೆ ಮನೆ ಬೆಳಗಿಸಿದವರು
ನನ್ನ ತಂದೆಯ ಗೆಳೆಯರು, ಪ್ರಾತಃಸ್ಮರಣೀಯರು
ನಿಮ್ಮ ಮಾದರಿ ಜೀವನವೇ ನನ್ನಿಂದ ಬರೆಸುತಿದೆ ಈ ನಾಲ್ಕು ಮಾತುಗಳನು

ಹಲವು ವರ್ಷಗಳ ಹಿಂದಿನ ಮಾತು
ನಾನೇನು ಪತ್ರಿಕೆಗಳಲಿ, ಬರೆದರೂ ರೇಡಿಯೋದಲಿ ಕವನ ವಾಚಿಸಿದರೂ,
ನನ್ನ ತಂದೆ ತಾಯಿಯರಂತೆ ಓದಿ ಹುರಿದುಂಬಿಸಿದವರು ನೀವು
ನನ್ನ ಮೊದಲ ಪುಸ್ತಕ 'ಸ್ನೇಹ ಸಂಗ್ರಹ' ಬಿಡುಗಡೆಯನು
ನಮ್ಮ 'ಅನುಗ್ರಹ' ಮನೆಯಲಿ ನಡೆಸಿ ಆಶೀರ್ವದಿಸಿದಿರಿ

ಮರಿಯಪ್ಪಯ್ಯ– ಭಾಗೀರಥಿಯವರ ಸುಪುತ್ರ ನೀವು
ಅಣ್ಣ ತಮ್ಮ ಅಕ್ಕ ತಂಗಿ ಬಂಧು ಬಳಗ ಅಪಾರ,
ಪ್ರಾಥಮಿಕ ವಿದ್ಯೆಯ ಬಳಿಕ ಮಿಲಿಟರಿ ಸೇರಿದ ಶಿಸ್ತಿನ ಸಿಪಾಯಿ
ಬಳಿಕ ಮಂಗಳೂರಿನಲಿ ಡಿಪ್ಲೊಮೊ ಇಂಜಿನಿಯರಿಂಗ್,

'ಸ್ಟಾಂಡರ್ಡ್ ಆಟೋಮೊಬೈಲ್' ಸ್ಥಾಪಿಸಿದಿರಿ
ಉದ್ಯಮ ವಿಸ್ತರಿಸುತ್ತಾ ದ್ವಿಚಕ್ರ, ತ್ರಿಚಕ್ರ ವಾಹನಗಳ
ಬಿಡಿಭಾಗಗಳ ಮಾರಾಟ, ಹಲವಾರು ವರ್ಕ್‌ಶೋಪ್‌ಗಳ
ಶೋರೂಂಗಳ ಹುಟ್ಟುಹಾಕಿದಿರಿ, ಹಿಂದೆ ಹಿಂದೆ ನೋಡದೆ ಬರೇ ಮುಂದೆ ಸಾಗಿದಿರಿ
ನಮ್ಮ ಸಮಾಜದ ಬಹಳಷ್ಟು ಯುವಕರಿಗೆ ಕರೆದು
ತರಬೇತಿ ನೀಡಿ, ಕೆಲಸ ಒದಗಿಸಿ ಅನ್ನದಾತರಾದಿರಿ.

ನನ್ನ ಅಮ್ಮ ನಿಮ್ಮನ್ನು 'ಕಾರ್ ರಾಜ, ಸ್ಕೂಟರ್ ರಾಜ' ಎನ್ನುತ್ತಿದ್ದರು.
ಶಾರ ಶಿವರಾಯರ ಪುತ್ರಿ ಸುವರ್ಣಳ ವರಿಸಿ, ಮಕ್ಕಳು
ಮೊಮ್ಮಕ್ಕಳ ಪಡೆದು ಧರ್ಮಛತ್ರದಂತಿರುವ ನಿಮ್ಮ 'ರಾಮನಿಲಯ'
ಮನೆಯಲಿ ಕಷ್ಟ ಸುಖಗಳ ನಡುವೆ ಎಲ್ಲರೊಡನೆ (ಪತ್ನಿವಿಯೋಗವಾದರೂ)
ನಗುಮೊಗದಿಂದ ಬಾಳಿದಿರಿ, ಎಲ್ಲರ ಶ್ರೇಯಸ್ಸನ್ನೇ ಬಯಸಿದಿರಿ.

ಔದ್ಯೋಗಿಕ, ಸಾಮಾಜಿಕ ಕ್ಷೇತ್ರಗಳಲ್ಲೂ ನೀವು ಮುಂದು
ಲೆಕ್ಕವಿಲ್ಲದಷ್ಟು ಸನ್ಮಾನ ಪ್ರಶಸ್ತಿ, ಬಿರುದುಗಳ ಪಡೆದಿರಿ
ದಾಖಲಿಸಿದರೆ ಒಂದು ಹೊತ್ತಗೆ(ಪುಸ್ತಕ)ಯೇ ಆಗಬಹುದು
ಸಾಗರದಂತಿರುವ ನಿಮ್ಮ ಬಗ್ಗೆ ಬಿಂದುವಾಗಿ ನಾನೇನು ಬರೆಯಲಿ !

ನೃತ್ಯ, ಸಂಗೀತ, ಭಜನೆ ಎಲ್ಲದರಲ್ಲೂ ಆಸಕ್ತಿ
ಮಕ್ಕಳಿಗೆ ಮೊಮ್ಮಕ್ಕಳಿಗೆ ಯೋಗ್ಯ ಗುರುಗಳಿಂದ ಕಲಿಸಿ ಅರೆದು ಕುಡಿಸಿದಿರಿ
ನಿಮ್ಮ 'ರಾಮನಿಲಯ'ದ ರಾಮನವಮಿಯಂತೂ
ಭಜನೆ ಭೋಜನಗಳಿಗೆ ಹೆಸರುವಾಸಿ
'ಎಲ್ಲಿರುವೆ ತಂದೆ ಬಾರೋ ಹೇ ಮಾರುತಿ' ಎಂಬ ಭಜನೆ !
ನಿಮ್ಮಿಂದ ಲೋಪವಾದರೆ ಮಂಗಳಾರತಿಯೇ ಇಲ್ಲವೇನೊ ?
ನಿಮ್ಮ ಇಷ್ಟದೇವರೇ ಶ್ರೀರಾಮನೋ ಎಂಬಂತೆ ತಲ್ಲೀನ ನೀವು
ಶ್ರೀರಾಮನಂತೆ ಬಾಳಿ ಬದುಕಿದ ಮರ್ಯಾದಾ ಪುರುಷೋತ್ತಮ ನೀವು
ಶೃಂಗೇರಿ ಶಾರದಾಂಬೆ ಮತ್ತು ಗುರುಗಳಲ್ಲಿ ನಿಮಗೆ ಅಪಾರ ಶ್ರದ್ಧೆ ಭಕ್ತಿ,
ಸದಾ ಕ್ರಿಯಾಶೀಲರಾಗಿ, ಚೈತನ್ಯಶಾಲಿಗಳಾಗಿ, ಉತ್ಸಾಹ ತುಂಬಿ
ಧೈರ್ಯಶಾಲಿಗಳಾಗಿದ್ದವರು ನೀವು

ಸಭೆಯಲ್ಲಿ ಸದಾ ನೀಟಾಗಿ, ಶಿಸ್ತಾಗಿ ಅಲಂಕರಿಸಿ ಬಂದು
ನೀವು ಕುಳಿತರೆ ಒಂದು ಶೋಭೆ,
ಬಡವ, ಬಲ್ಲಿದ, ಹಿರಿಯರು ಕಿರಿಯರು, ಮೇಲುಕೀಳೆನ್ನದೆ
ನೀವು ವಿವರವಾಗಿ ಎಲ್ಲರೊಡನೆ ಮಾತನಾಡುವುದು ಅನುಕರಣೀಯ
ನಿಮ್ಮಿಂದ ಉಪಕೃತರಾದವರು ಹಲವರು
ಇನ್ನು ಹೆಣ್ಣು ಹೃದಯದ ರಾಯರೇ ನಿಮಗೆ
ಅಡಿಗೆ ಮನೆಯ ಬಗ್ಗೆಯೂ ವಿಶೇಷ ಮಾಹಿತಿ ! (ನಳ ಮಹಾರಾಜರೋ?)

ಜನಾನುರಾಗಿಯಾದ ನಿಮ್ಮ ಆದರ್ಶವನು ನಾವೆಲ್ಲಾ,
ಯುವಕರು ನೆನಪಿಸಿಕೊಂಡು ಅನುಸರಿಸಿದರೆ ಅದೇ
ನಾನು ನಿಮಗೆ ಪುಟ್ಟ ಶ್ರದ್ಧಾಂಜಲಿ ಬರೆದುದು ಸಾರ್ಥಕ !
ಮನೆಯವರಿಗೆಲ್ಲಾ ಈ ಮಹಾನ್ ಚೇತನವು ದಾರಿದೀಪವಾಗಲಿ
ಅಗಲುವಿಕೆಯ ಸಹಿಸುವ ಶಕ್ತಿ ಪರಮಾತ್ಮನು ಕರುಣಿಸಲಿ.

***ಶ್ರೀಮತಿ ಸ್ನೇಹಲತಾ ದಿವಾಕರ್, ಸುರತ್ಕಲ್***



# ಡಾ| ಲಲಿತಾ ರಾವ್ ವಿಧಿವಶ

ಮಹಾರಾಷ್ಟ್ರದ ಆರೋಗ್ಯ ಸಚಿವರಾಗಿದ್ದ ಡಾ| ಲಲಿತಾ ರಾವ್ ಅವರು ತನ್ನ 93ನೇ ವರ್ಷ ಪ್ರಾಯದಲ್ಲಿ ತಾರೀಕು 28–6–2013ರಂದು ವಿಧಿವಶರಾದರು.

ಮಂಗಳೂರಿನ **ಕೀರ್ತಿಶೇಷ ಡಾ| ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರಿ**ಯವರ ಪುತ್ರಿಯಾಗಿದ್ದ ಮೃತರು ಉದ್ಯಮಿ **ಪಡುಬಿದ್ರಿ ವೆಂಕಟ್ ರಾವ್** ಅವರನ್ನು ವಿವಾಹವಾಗಿದ್ದರು. ಇವರು ಖ್ಯಾತ ಕ್ರಿಕೆಟಿಗ **ರವಿ ಶಾಸ್ತ್ರಿ**ಯವರ ಸೋದರತ್ತೆ. ಮೃತರು ಅಮೇರಿಕದಲ್ಲಿ ನೆಲೆಸಿರುವ ಓರ್ವ ಪುತ್ರನನ್ನು ಅಗಲಿದ್ದಾರೆ.

ತನ್ನ 17ನೇ ಹರೆಯದಲ್ಲಿ ಮುಂಬಯಿಗೆ ಆಗಮಿಸಿದ ಲಲಿತಾ ಶಾಸ್ತ್ರಿಯವರು ತನ್ನ ಮೆಟ್ರಿಕ್ ಶಿಕ್ಷಣವನ್ನು ಮುಂದೆ ವೈದ್ಯಕೀಯ ಶಿಕ್ಷಣವನ್ನೂ ಮುಂಬೈಯಲ್ಲಿ ಪೂರೈಸಿದರು. ಬಳಿಕ ಇಂಡಿಯನ್ ಮೆಡಿಕಲ್ ಅಸೋಸಿಯೇಶನ್‌ನ ರಾಜ್ಯ ಉಪಾಧ್ಯಕ್ಷರಾಗಿ ನಿಯುಕ್ತಿಗೊಂಡರು. ಮುಂದೆ 1979ರಲ್ಲಿ ಚಿಕಾಗೋದಲ್ಲಿ ನಡೆದ ಅಮೇರಿಕನ್ ಮೆಡಿಕಲ್ ಕಾನ್ಫರೆನ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದರು. ತನ್ನ ಸಮಾಜಸೇವೆಗಾಗಿ ಹಲವು ಪ್ರಶಸ್ತಿಗಳನ್ನು ಪಡೆದವರು.

**ಸಾಮಾಜಿಕ ಮತ್ತು ರಾಜಕೀಯ ಜೀವನ :**



1937-38ರಲ್ಲಿ ವಿದ್ಯಾರ್ಥಿಯಾಗಿದ್ದಾಗ ಮಾಟುಂಗಾ ತಾಲೂಕು ಕಾಂಗ್ರೆಸ್ ಸಮಿತಿಯಲ್ಲಿ ಕೆಲಸ ಮಾಡಿದ್ದ ಅವರು ಕ್ವಿಟ್ ಇಂಡಿಯಾ ಚಳವಳಿಯಲ್ಲೂ ಭಾಗವಹಿಸಿ ಭೂಗತರಾಗಿದ್ದ ಕಾಂಗ್ರೆಸ್ ಕಾರ್ಯಕರ್ತರಿಗೆ ವೈದ್ಯಕೀಯ ಸೇವೆ ಸಲ್ಲಿಸಿದ್ದರು.

1968ರಲ್ಲಿ ಇಂಡೋ–ಸೋವಿಯತ್ ಕಲ್ಚರಲ್ ಸೊಸೈಟಿ ಉಪಾಧ್ಯಕ್ಷೆಯಾದ ನಂತರ ಮಾಟುಂಗಾ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಅವರು ರಾಜಕೀಯ ಮತ್ತು ಸಾಮಾಜಿಕ ರಂಗಗಳಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳತೊಡಗಿದ್ದರು.

ಕೊಳಚೆಗೇರಿ ಪ್ರದೇಶಗಳಲ್ಲಿ ಮಹಿಳೆಯರಿಗಾಗಿ ಮತ್ತು ಮಕ್ಕಳಿಗಾಗಿ ತರಗತಿಗಳನ್ನು ನಡೆಸುತ್ತಿದ್ದರು. ಸತತ ಪ್ರಯತ್ನ ನಡೆಸಿ ಮಾಟುಂಗಾ ಕೊಳಚೆಗೇರಿಯಿಂದ ಮದ್ಯದ ಅಡ್ಡೆಗಳನ್ನು ತೆರವುಗೊಳಿಸುವಲ್ಲಿ ಯಶಸ್ವಿಯಾಗಿದ್ದರು.

ಕೊಳಚೆಗೇರಿ ಪ್ರದೇಶಗಳಲ್ಲಿ ಪೊಲೀಸ್ ಠಾಣೆ ಮತ್ತು ಅಂಚೆ ಕಚೇರಿಗಳ ಸ್ಥಾಪನೆಗೂ ಡಾ| ರಾವ್ ಮಹತ್ವದ ಪಾತ್ರವಹಿಸಿದ ಅವರು ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿಗಳನ್ನು ಸ್ಥಾಪಿಸಲು ಕೊಳಚೆಗೇರಿವಾಸಿಗಳನ್ನು ಪ್ರೋತ್ಸಾಹಿಸಿದರು.

1980ರಲ್ಲಿ ಟ್ರಾಂಬೇ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಪ್ರಚಂಡ ಬಹುಮತದೊಂದಿಗೆ ಅವರು ಜಯ ಗಳಿಸಿದ್ದರು. ಬಳಿಕ ಸಾರ್ವಜನಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯಾಗಿದ್ದರು. ಆರೋಗ್ಯ ಸಚಿವೆಯಾಗಿದ್ದ ಅವಧಿಯಲ್ಲಿ ಆಸ್ಪತ್ರೆಗಳ ಸ್ಥಿತಿ ಸುಧಾರಣೆಗೆ ಅಪಾರ ಶ್ರಮ ವಹಿಸಿದ್ದರು.

ಏಷ್ಯಾದ ಅತೀ ದೊಡ್ಡ ಕೊಳಚೆಗೇರಿ ಪ್ರದೇಶ ಎನ್ನಲಾದ ಧಾರಾವಿಯಲ್ಲಿ ಪೋಲಿಯೋ ಮತ್ತು ಕುಷ್ಠರೋಗ ನಿರ್ಮೂಲನೆಗೆ ಡಾ| ಲಲಿತಾ ರಾವ್ ವಹಿಸಿರುವ ಪಾತ್ರ ಈಗಲೂ ಮನೆಮಾತಾಗಿ ಉಳಿದಿದೆ.

ಕುಷ್ಠ ರೋಗ ನಿರ್ಮೂಲನಾ ಅಭಿಯಾನದಲ್ಲಿ ಎರಡು ಸಾವಿರ ವೈದ್ಯರನ್ನು ಮತ್ತು ಅಲೋಪತಿ, ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ ವೈದ್ಯಕೀಯ ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

**ಸಾಂಸ್ಕೃತಿಕ ಚಟುವಟಿಕೆ :**

**ಡಾ| ಲಲಿತಾ ರಾವ್** ಮುಂಬೈ ಮಹಾನಗರ ಸಾಂಸ್ಕೃತಿಕ ರಂಗಕ್ಕೂ ಮಹತ್ವದ ಕೊಡುಗೆ ನೀಡಿದ್ದಾರೆ. ಅವರು ಅಪ್ರತಿಮ ಕೊಳಲುವಾದಕಿ, ವಿವಿಧ ಸಾಂಸ್ಕೃತಿಕ ಸಂಘಟನೆಗಳನ್ನು ಮುನ್ನಡೆಸಿದ್ದ ಅವರು ಬಿಸ್‌ಕೆಬಿ ಅಸೋಸಿಯೇಶನ್ ಮತ್ತು ಕನ್ನಡ ಕಲಾಕೇಂದ್ರದ ಅಧ್ಯಕ್ಷರಾಗಿ ಅನೇಕ ವರ್ಷ ಸೇವೆ ಸಲ್ಲಿಸಿದ್ದು ಮುಂಬೈಯ ಕಿಂಗ್ ಸರ್ಕಲ್‌ನಲ್ಲಿರುವ ಮೈಸೂರು ಅಸೋಸಿಯೇಶನ್ ಜತೆ ನಿಕಟ ಸಂಪರ್ಕ ಹೊಂದಿದ್ದರು.

ಸಾಮಾಜಿಕ ಮತ್ತು ವೈದ್ಯಕೀಯ ರಂಗಗಳಲ್ಲಿ ಸಲ್ಲಿಸಿದ ಸೇವೆಗಾಗಿ 1983ರಲ್ಲಿ ಪ್ರತಿಷ್ಠಿತ ಡಾ| ಬಿ. ಸಿ. ರಾಯ್ ರಾಷ್ಟ್ರೀಯ ಸ್ಮಾರಕ ಪ್ರಶಸ್ತಿ ಕೂಡಾ ಇವರಿಗೆ ಲಭಿಸಿತ್ತು.

ಜ್ಞಾನಶಕ್ತಿ ಬಳಗವು ಇವರ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಬಯಸುತ್ತದೆ.

***– ಆಧಾರ : 'ಸುಲಗ್ನ' ಕನ್ನಡ ಮಾಸಪತ್ರಿಕೆ, ಉಡುಪಿ***


**ಹೆಬ್ಬಾರ್ ಎಂಟರ್‌ಪ್ರೈಸಸ್**

**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101**

*ಶುಭ ಸಮಾರಂಭಗಳಿಗೆ ಬೇಕಾಗುವ*
*ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು*
*ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*

ಫೋನ್ : 2531493 (O), 2530851 (R), ಮೊಬೈಲ್ : 9448437893

Prop. : ***Kishore Kumar Kedige***

Ph. : 2231524
M. : 9880726325

KYADIGE
AUTOMOBILES





**Opp. to D. P. Stores**
**Main Road, B. C. Road, Bantwal Tq.**

***Dealers in : 2 & 3 WHEELERS SPARES***

# ಚಾತುರ್ಮಾಸದಲ್ಲಿ ಗುರುಗಳ ಭೇಟಿಯಿಂದ ಪಾಪ ಪರಿಹಾರ ಮತ್ತು ಜೀವನದಲ್ಲಿ ಶ್ರೇಯಸ್ಸು

– ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿ






**ಶೃಂಗೇರಿ :** 'ಚಾತುರ್ಮಾಸದಲ್ಲಿ ಗುರುಗಳ ದರ್ಶನ ಮಾಡಿದ್ದಲ್ಲಿ ಪಾಪ ಪರಿಮಾರ್ಜನೆ ಹಾಗೂ ಜೀವನದಲ್ಲಿ ಶ್ರೇಯುಸ್ಸು ದೊರೆಯುವುದು. ಅದೇ ರೀತಿ ಸಮಾಜ ಮತ್ತು ಮಠಗಳ ಸಂಬಂಧ ವೃದ್ಧಿಯಾದಲ್ಲಿ ಸಂಸ್ಕೃತಿ ಉಳಿಯುವುದು. ಇದರಿಂದ ಸನಾತನ ಧರ್ಮದ ಏಳಿಗೆ ಉಂಟಾಗುವುದು. ಶಂಕರ ಭಗವತ್ಪಾದರ ಆಶಯ ಕೂಡಾ ಇದೇ ಆಗಿತ್ತು. ಇಲ್ಲಿ ಸೇರಿರುವ ಸ್ಥಾನಿಕ ಸಮಾಜದವರನ್ನು ಕಂಡಾಗ ನನಗೆ ಅತೀವ ಸಂತೋಷವಾಗಿದೆ. ಹಾಗಾಗಿ ನನ್ನ ಪರಿಪೂರ್ಣ ಅನುಗ್ರಹವನ್ನು ನಿಮಗೆ ನೀಡಿದ್ದೇನೆ. ಕಳೆದ ಬಾರಿ ನಾನು ಚೆನ್ನೈ ಯಲ್ಲಿದ್ದಾಗ ತಾವುಗಳು ಅಲ್ಲಿಗೂ ಬಂದಿದ್ದೀರಾ. ಆದರೆ ಶೃಂಗೇರಿಯಲ್ಲಿ ನಾನಿದ್ದಾಗ ನಿಮಗೆ ಅನುಕೂಲವಾಗಿ ಇಷ್ಟು ಸಂಖ್ಯೆಯಲ್ಲಿ ಸೇರಿದ್ದು ನನಗೆ ಇನ್ನೂ ಹೆಚ್ಚಿನ ಸಂತೋಷ ಉಂಟುಮಾಡಿದೆ. ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮಿಗಳ ಚಾತುರ್ಮಾಸ ಪ್ರಯುಕ್ತ ಗುರುದರ್ಶನಕ್ಕಾಗಿ ತಾರೀಕು 25-8-2013 ಶೃಂಗೇರಿಗೆ ತೆರಳಿದ ಸ್ಥಾನಿಕ ಸಮಾಜ ಬಾಂಧವರಿಗೆ ಅನುಗ್ರಹ ನೀಡುತ್ತಾ ನುಡಿದರು. ಮುಂದು ವರಿಯುತ್ತಾ ಸಮಾಜದಲ್ಲಿ ಕಷ್ಟ ಸುಖಗಳು ಇರುವಂತದ್ದೇ. ಆದರೂ ಕಷ್ಟಗಳು ಬಂದಾಗ ಗುರುಗಳಲ್ಲಿ ಅರಿಕೆ ಮಾಡಿದ್ದಲ್ಲಿ ಇದರಿಂದ ಸಮಾಜದ ಕಷ್ಟ ನಿವಾರಣೆ ಸಾಧ್ಯ ಎಂದು ತಿಳಿಸಿದರು. ಸಮಾಜದಿಂದ ಬಂದ ಹೊರೆಕಾಣಿಕೆಗಳಿಂದ ಪ್ರಸನ್ನರಾದ ಅವರು ಅದಕ್ಕಾಗಿ ವಿಶೇಷ ಅನುಗ್ರಹವನ್ನು ದಯಪಾಲಿಸಿದರು. ಶ್ರೀ ಸುಬ್ರಹ್ಮಣ್ಯ ಸಭಾದಿಂದ ಸುಮಾರು 70ಕ್ಕಿಂತಲೂ ಅಧಿಕ ಸಮಾಜ ಬಾಂಧವರು ಒಂದು ಬಸ್ಸು ಮತ್ತು ಇತರ ವಾಹನಗಳ ಮೂಲಕ ಶೃಂಗೇರಿಗೆ ತೆರಳಿದರು. ಶ್ರೀ ಸಭಾದಲ್ಲಿ ತಯಾರಿಸಿದ ಮೂಡೆ, ಕ್ಷೀರಾ, ಕಾಫಿ, ಚಾ ಸೇವನೆಗೆ ನಂದಿಕೂರಿನ ಶ್ರೀ ಜನಾರ್ಧನ ರಾವ್‌ರವರು ತಮ್ಮ ಮನೆಯಲ್ಲಿ ವ್ಯವಸ್ಥೆಗೊಳಿಸಿ ಸಮಾಜ ಬಾಂಧವರ ಕೃತಜ್ಞತೆಗೆ ಪಾತ್ರರಾದರು. ಮಧ್ಯಾಹ್ನ ಶೃಂಗೇರಿಯಲ್ಲಿ ಪ್ರಸಾದ ಭೋಜನ ಸ್ವೀಕರಿಸಿದ ಸಮಾಜ ಬಾಂಧವರು ಸಂಜೆ ಶ್ರೀ ಸಭಾದಲ್ಲಿ ತಯಾರಿಸಿದ ಚಟ್ಟಂಬಡೆಯನ್ನು ರಾಷ್ಟ್ರೀಯ ಹೆದ್ದಾರಿಯಲ್ಲಿ ಸವಿದರು. ಸಮಯ ಕಳೆಯುವ ಮನರಂಜನಾ ಕಾರ್ಯಕ್ರಮದಲ್ಲಿ ಬೆಳಗ್ಗೆ ಭಕ್ತಿಗೀತೆ, ಶ್ಲೋಕಗಳು, ಅಷ್ಟೋತ್ತರಗಳು ಮೇಳೈಸಿದರೆ ಮಧ್ಯಾಹ್ನ ನಂತರ ಹಳೆ, ಹೊಸ ಚಿತ್ರಗೀತೆಗಳು, ಅಂತ್ಯಾಕ್ಷರಿಯಲ್ಲಿ ವಿಜೃಂಭಿಸಿ ಪ್ರತಿಭಾ ಪ್ರದರ್ಶನಕ್ಕೆ ಸಾಕ್ಷಿಯಾಯಿತು. ಹಿರಿಯರು, ಕಿರಿಯರು, ಅಬಾಲವೃದ್ಧರು ಉತ್ಸಾಹದಿಂದ ಪಾಲ್ಗೊಂಡರು. ಶ್ರೀ ಸಭಾದ ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಅನಿಲ್ ರಾವ್, ಶ್ರೀ ಚೇತನ್ ಶರ್ಮ ವ್ಯವಸ್ಥೆಗಳನ್ನು ನಿರ್ವಹಿಸಿದರೆ ಶ್ರೀ ಪಿ. ಶ್ರೀಕಾಂತ್ ರಾವ್ ಮನೋರಂಜನಾ ಕಾರ್ಯಕ್ರಮ ಸಂಯೋಜಿಸಿದರು. ಯುವ ವೇದಿಕೆಯ ಸದಸ್ಯರು ಎಲ್ಲಾ ವಿಧದಲ್ಲಿ ಸಹಕರಿಸಿ ಹೊರೆಕಾಣಿಕೆಯನ್ನು ಗುರುಭವನಕ್ಕೆ ತಲುಪಿಸುವ ವ್ಯವಸ್ಥೆ ಮಾಡಿದರು. ಶ್ರೀಗಳ ಅನುಗ್ರಹ ನುಡಿಗಳಿಂದ ಪುಳಕಿತರಾದ ಸಮಾಜಬಾಂಧವರು ಶ್ರೀ ಸಭಾದ ಮುಂದಿನ ಕಾರ್ಯಕ್ರಮಗಳನ್ನು ಎದುರು ನೋಡುತ್ತಾ ಮನೆ ಸೇರಿದರು.

*ವರದಿ : ಪಿ. ಶ್ರೀಕಾಂತ್ ರಾವ್, ಮಂಗಳೂರು*
*ಚಿತ್ರ : ರಘುವೀರ್, ಪೆರ್ಡೂರ್*

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ವಿಶೇಷ ಮಹಾಸಭೆ

ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.), ಮಂಗಳೂರು, ದ. ಕ. ಇದರ **ವಿಶೇಷ ಮಹಾಸಭೆ**ಯು ದಿನಾಂಕ 1-9-2013ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 11-00ಕ್ಕೆ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಶತಮಾನೋತ್ಸವ ಸಭಾಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕರುಣ್ ರಾವ್ ಬೆಳ್ಳೆ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಕರ್ನಾಟಕ ಸಹಕಾರ ಸಂಘ (ತಿದ್ದುಪಡಿ) ಕಾಯ್ದೆ 2012 ಕರ್ನಾಟಕ ರಾಜ್ಯ ಅಧಿಸೂಚನೆಯ ಉಪನಿಬಂಧನೆಗಳ ತಿದ್ದುಪಡಿಯ ಮಂಜೂರಾತಿಗಾಗಿ ಈ ಸಭೆಯನ್ನು ಜರುಗಿಸಲಾಯಿತು. ಸಂಘದ ಅಧ್ಯಕ್ಷರು ಉಪನಿಬಂಧನೆಗಳ ತಿದ್ದುಪಡಿ ಪ್ರಸ್ತಾವನೆಯನ್ನು ಮಹಾಸಭೆಯ ಮುಂದೆ ಮಂಡಿಸಿದರು. ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಸೂಕ್ತ ವಿವರಣೆಗಳನ್ನು ನೀಡಿದ ನಂತರ ತಿದ್ದುಪಡಿಯ ಪ್ರಸ್ತಾವನೆಯು ಸರ್ವಾನುಮತದಿಂದ ಅಂಗೀಕಾರವಾಯಿತು. ಆರಂಭದಲ್ಲಿ ಸಂಘದ ಅಧ್ಯಕ್ಷರು ಎಲ್ಲರನ್ನೂ ಸ್ವಾಗತಿಸಿದರು. ಕೊನೆಯಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಉದಯ ಕುಮಾರ ಪಿ. ರಾವ್ ವಂದನಾರ್ಪಣೆ ಮಾಡಿದರು.

## ಪಡುಬಿದ್ರಿಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ನೂತನ ಆಡಳಿತ ಮಂಡಳಿ

**ಪಿ. ಬಿ. ವಾಸುದೇವ ರಾವ್**
ಗೌರವಾಧ್ಯಕ್ಷರು

**ಎಮ್. ಕೆ. ಮೋಹನ್ ರಾವ್**
ಅಧ್ಯಕ್ಷರು

**ವೈ. ವಿ. ಸುಬ್ಬ ರಾವ್, ಎ. ರಾಮರಾವ್**
ಉಪಾಧ್ಯಕ್ಷರುಗಳು

**ಸುಧಾಕರ ಬೆಳ್ಳೆ**
ಕಾರ್ಯದರ್ಶಿ

**ವೈ. ಮಾಧವ ರಾವ್**
**ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ**
ಜೊತೆ ಕಾರ್ಯದರ್ಶಿಗಳು

**ಅರವಿಂದ ರಾವ್**, ಕೋಶಾಧಿಕಾರಿ

**ಶ್ರೀಕಾಂತ್ ರಾವ್**, ಸಹಕೋಶಾಧಿಕಾರಿ

**ಸುದರ್ಶನ ವೈ. ಯಸ್.**, ಪತ್ರಿಕಾ ವಕ್ತಾರ

**ಎಸ್. ಜನಾರ್ಧನ ರಾವ್**
**ಶ್ರೀನಿವಾಸ ಶರ್ಮಾ**
ಯುವ ವೇದಿಕೆಯ ಸಂಚಾಲಕರು

*ನಿರ್ದೇಶಕರುಗಳು*

**ದಿವಾಕರ ರಾವ್ ಎಂ. ಕೆ.; ಕೃಷ್ಣರಾಜ ರಾವ್; ಉಲ್ಲಾಸ್ ರಾವ್; ಪಿ. ಡಿ. ಶೇಖರ್ ರಾವ್
ಐ. ಲಕ್ಷ್ಮೀಕಾಂತ್ ರಾವ್; ಚಂದ್ರಶೇಖರ್ ರಾವ್; ಸುದರ್ಶನ್ ಪ್ರಸಾದ್
ನಯನಾಭಿರಾಮ ಪ್ರಸಾದ್; ವಿದ್ಯಾರಣ್ಯ ರಾವ್; ಗೋವಿಂದ ರಾವ್
ಶ್ರೀಮತಿ ಸೀತಾದೇವಿ ಭಾಸ್ಕರ ರಾವ್; ಶ್ರೀಮತಿ ನಿರುಪಮಾ ಎಸ್. ರಾವ್
ಶ್ರೀಮತಿ ರಮ್ಯ ಎ. ರಾವ್; ಶ್ರೀಮತಿ ಬಿ. ಎಸ್. ಲಲಿತಾ ರಾವ್**

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಡೆದ 'ಆಟಿತ ಆಟ ಕೂಟ'ದ ಸ್ಪರ್ಧೆಗಳಲ್ಲಿ ವಿಜೇತರು




**ಬಹುಮಾನ ವಿಜೇತರು**

**ಕೇರಂ : 16 ವರ್ಷದೊಳಗಿನ ವಿಭಾಗ**
ಪ್ರಥಮ : ಪ್ರಣೀತ್ ರಾವ್ ಮತ್ತು ಸಾತ್ವಿಕ
ದ್ವಿತೀಯ : ಶುಭಶ್ರೀ ಮತ್ತು ಪಲ್ಲವಿ

**16 ವರ್ಷಕ್ಕಿಂತ ಮೇಲ್ಪಟ್ಟವರ ವಿಭಾಗ**
ಪ್ರಥಮ : ಮನೀಷ್ ರಾವ್ ವಿ. ಮತ್ತು ಬಿ. ಜಯಚಂದ್ರ
ದ್ವಿತೀಯ : ಆನಂದ ರಾವ್ ಕೇದಗೆ ಮತ್ತು ಕಾರ್ತಿಕ್

**ಚೆನ್ನೆಮಣೆ :** ನಿಶಾಂತ್




## ಜ್ಞಾನ – ನುಡಿ

ಆತ್ಮಸಂಯಮದಿಂದ ಕೂಡಿದ 'ವಿವೇಕ', ವಿನಯದಿಂದ ಕೂಡಿದ 'ವಿದ್ಯೆ', ಸರಳತೆಯಿಂದ ಕೂಡಿದ 'ಅಧಿಕಾರ' ಇವು ಮಹಾತ್ಮರ ಲಕ್ಷಣ.

**ಸುಭಾಷಿತ**

## ಜ್ಞಾನ – ನಗೆ

**ಹತ್ತು ವರ್ಷಗಳ ಹಿಂದೆ ...**
ಕೆಲಸದವ : ನಾನು ಇವತ್ತು ಕೆಲಸಕ್ಕೆ ಬರ್ಲ್ಲಾ ಧಣಿಗಳೇ...?
ಯಜಮಾನ : ನಾಲ್ಕು ದಿನ ಬಿಟ್ಟು ಹೇಳ್ತೇನೆ ...
**ಈಗ...**
ಯಜಮಾನ : ಇವತ್ತು ಮನೆಗೆ ಕೆಲಸಕ್ಕೆ ಬರ್ತೀಯೇನಪ್ಪಾ...?
ಕೆಲಸದವ : ಇರಿ, ಯಾವುದಕ್ಕೂ ನಾಲ್ಕು ದಿನಗಳು ಕಳೆಯಲಿ, ಆಮೇಲೆ ನೋಡೋಣ...!

## ಜ್ಞಾನ – ಗಾದೆ

ಆದಾಯ ಸೂತ್ ಪಾಯ ಗೆಪ್ಪೊಡು
ಅಣ್ಣನ ಬೆರಿಸಾಯ ಇತ್ತಿ ಪೊಣ್ಣಗ್, ಆನೆದಾತ್ ಬಲ
ಆಳಾದ್ ಬೆನ್, ರಾಜ ಲೆಕ್ಕ ತಿನ್

## ಜ್ಞಾನ – ವಿಸ್ಮಯ

ಅಮೇರಿಕದಲ್ಲಿ ಮಿಲ್ಲ ಬ್ರಾನ್ ಎಂಬ 'ವಾಂತಿ ಕಲಾವಿದೆ' ಇದ್ದಾಳೆ. ಕ್ಯಾನ್ವಾಸ ಸಿದ್ಧಪಡಿಸಿಕೊಂಡು ಬಣ್ಣ ಮಿಶ್ರಿತ ಹಾಲನ್ನು ಕುಡಿದು ಗಂಟಲೊಳಗೆ ಬೆರಳು ಹಾಕಿ ವಾಂತಿ ಮಾಡುತ್ತಾಳೆ. ಕ್ಯಾನ್ವಾಸನಲ್ಲಿ ಅದ್ಭುತ ಕಲಾಕೃತಿ ತಯಾರ್!



*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur*
*Printed at : Rajesh Power Press, Darbe - 574 202, Puttur, D. K.*